TIGHT BINDING BOOK

TEXT FLY
WITHIN THE
BOOK ONLY

THE BOOK WAS
DRENCHED

UNIVERSAL LIBRARY
OU_198469
UNIVERSAL LIBRARY

K87
B57
K2779

OUP-23-4-1-69—5,000

**OSMANIA UNIVERSITY LIBRARY**

Call No 894 B57 K    Accession No K 2778

Author

Title

This book should be returned on or before the date last marked below

ಸಂಸ್ಕೃತ ಸಾಹಿತ್ಯ ಸುಧಾ

- ೩ -

ಭಾರವಿ ಮಹಾಕವಿಯ

# ಕಿರಾತಾರ್ಜುನೀಯ

( ಮಹಾಕಾವ್ಯ )

卐

ಲೇಖಕರು:

ಪಂಡಿತ ಚೆ. ಎ. ಕವಲಿ

ಪ್ರಕಾಶಕರು:

ರಾಮಾಶ್ರಯ ಬುಕ್ ಡಿಪೋ,

ಸುಭಾಸ ರೋಡ — ಧಾರವಾಡ

ಸಾಹಿತ್ಯ ಭಾಂಡಾರ

ಮುದ್ರಕರು.
ಎಲ್. ಆಯ್. ಅಕಳವಾಡಿ
ಬಿ. ಎ., ಬಿ. ಕಾಮ್
ಮನೋಹರ ಮುದ್ರಣಾಲಯ,
ಮಂಗಳವಾರಪೇಟ : ಧಾರವಾಡ

ಬೆಲೆ ರೂ: 0.45

## ಮಕ್ಕಳ ಮುತ್ತಿನ ಮಾಲೆ

ಮುದ್ದು ಮಕ್ಕಳಿಗೆ ಮುದ್ದಾದ ಸರಳ ಭಾಷೆಯಲ್ಲಿ ಅವರ ಮನಸ್ಸನ್ನು ಆಕರ್ಷಿಸುವ ಸಾಹಿತ್ಯವನ್ನು ಒದಗಿಸುವದೇ ಈ ಮಾಲೆಯ ಉದ್ದೇಶ.

ಇವರಲ್ಲಿ ಧರ್ಮಸ್ಥಾಪಕರು, ವೀರರಾದ ರಾಣಿಯರು, ಶೂರರಾದ ರಾಜರು, ರಾಜಕೀಯ ಪಟುಗಳು, ಕ್ರಾಂತಿಕಾರರು, ಪುರಾಣದ ಮಹಾ ಪುರುಷರು, ವಿಜ್ಞಾನಿಗಳು, ವೈಜ್ಞಾನಿಕ ವಿಷಯದ ಚಿಕ್ಕ ಚಿಕ್ಕ ಹೊತ್ತಿಗೆಗಳು ಕಾಲಕಾಲಕ್ಕೆ ಪ್ರಕಟವಾಗುತ್ತವೆ.

**ಇವು ಮಕ್ಕಳಿಗೆ ಜ್ಞಾನದೀಪಗಳಂತಿವೆ !**

ರಾಮಾಶ್ರಯ ಬುಕ್ ಡಿಪೊ
— ಧಾರವಾಡ —

ಪ್ರಕಾಶಕರು:
ಆಯ್. ಆರ್. ಅಕಳವಾಡಿ ಆ್ಯಂಡ ಸನ್ಸ
ರಾಮಾಶ್ರಯ ಬುಕ್ ಡಿಪೊ,
ಸುಭಾಷರೋಡ : ಧಾರವಾಡ

# ಒ ಡೆ ಪು

ಸಂಸ್ಕೃತ ಭಾಷೆ ಪ್ರಪಂಚದ ಎಲ್ಲ ಭಾಷೆಗಳಲ್ಲಿಯೂ ಅಗ್ರಪಟ್ಟವನ್ನು ಪಡೆದಿದೆ. ಈ ಮಾತಿಗೆ ಬೆಂಬಲವಾಗಿ ಅನೇಕ ಕಾರಣಗಳಿವೆ: ಸಂಸ್ಕೃತ ಭಾಷೆ– ೧. ಅತ್ಯಂತ ಪ್ರಾಚೀನತಮವಾಗಿದೆ; ೨. ದ್ರಾವಿಡ ಮತ್ತು ಕೆಲವು ಗಿರಿಜನ ಭಾಷೆಗಳನ್ನು ಉಳಿದು ದೇಶ–ವಿದೇಶಗಳ ಮುಕ್ಕಾಲುವಾಸಿ ಭಾಷೆಗಳಿಗೆ ಮಾತೃ ಸ್ಥಾನದಲ್ಲಿದೆ; ೩. ದ್ರಾವಿಡ ಭಾಷಾ ಸಂತತಿಗೆ ಕೂಡ 'ಸಾಕುತಾಯಿ' ಯಾಗಿ ನಿಂತಿದೆ; ಆ ಸಂತತಿಯ ಸಂವರ್ಧನೆಗಾಗಿ ತನ್ನ ಅತುಲ ಸಂಪತ್ತನ್ನು ನೀಡಿದೆ. ೪. ಮಾನವ ಜೀವಿತದ ಹಿರಿಯ ಗುರಿ ಎನಿಸುವ ಮತ್ತು ಇಹ–ಪರ ಸೌಖ್ಯಗಳನ್ನು ಏಕೀಕರಿಸುವ ಅಧ್ಯಾತ್ಮವಾದದ ವೇದಾದಿ ವಾಙ್ಮಯಗಳಿಗೆ ಆರು ಸಾವಿರ ವರುಷಗಳ ಕೆಳಗೇ ಜನ್ಮ ಕೊಟ್ಟಿದೆ. ೫. ಜಾಗತಿಕ ಮಹಾಕವಿಗಳೆನಿಸಿದ ಭಾಸ, ಕಾಳಿದಾಸ, ಭವಭೂತಿ, ದಂಡಿ ಮುಂತಾದವರನ್ನು ಸಾಹಿತ್ಯ ಸಾಮ್ರಾಜ್ಯ ಸಿಂಹಾಸನದ ಮೇಲೆ ಕುಳ್ಳಿರಿಸಿದೆ. ೬. ಮೇಣದಂತೆ ಮಿದುವಾಗಿದ್ದು, ಅರ್ಥಗಾಂಭೀರ್ಯ ಶಬ್ದ ಸೌಷ್ಠವಗಳ ಬಲದಿಂದ ಯಾವುದೇ ವಿಚಾರವನ್ನು ಸಮರ್ಥಿಸಬಲ್ಲ ಶಕ್ತಿಯನ್ನು ಒಳಗೊಂಡಿದೆ. ೬. ಆಧ್ಯಾತ್ಮಿಕ ವಾಙ್ಮಯದಂತೆ, ವೈದ್ಯ, ಶಿಲ್ಪ, ವಿಜ್ಞಾನ, ಜ್ಯೋತಿಷ, ಗಣಿತ ಮುಂತಾದ ಭೌತಿಕ ಶಾಸ್ತ್ರಗಳ ಮಹಾ ಗ್ರಂಥಗಳನ್ನೂ ಒದಗಿಸಿದೆ. ೭. ಕಲಾವಿಲಾಸದ ಅಂಗಗಳಾದ ನೃತ್ಯ, ಸಂಗೀತ, ಚಿತ್ರಕಲೆ, ನಾಟಕ ಮೊದಲಾದ ಲಲಿತ–ಸಾಹಿತ್ಯಗಳಿಂದ ಓತಪ್ರೋತವಾಗಿ ತುಂಬಿಕೊಂಡಿದೆ. ೮. ರಸಾಲಂಕಾರ ಪರಿಪೋಷಣೆಗಂತೂ ಏಕಮೇವಾದ್ವಿತೀಯವಾಗಿ ಮೆರೆಯುತ್ತಿದೆ. ೯. ಸಂಸ್ಕೃತಿ ನಾಗರಿಕತೆಗಳ ಸುಂದರ ಸಮನ್ವಯವಾಗಿದೆ. ೧೦. ವಿಶ್ವದ ವಿವಿಧ ಭಾಷೆಗಳ ಅಭ್ಯಾಸಕ್ಕೆ ಮಿಗಿಲಾದ ಮಾಧ್ಯಮವೆನಿಸಿದೆ .... .

ಸಂಸ್ಕೃತ ಭಾಷೆಯ ಶ್ರೇಷ್ಠತೆಯ ಬಗೆಗೆ ಇನ್ನೂ ಕೆಲವು ಕಾರಣಗಳನ್ನು ಕೊಡಬಹುದು. ಎಂತೆಯೇ ಇದನ್ನು ದೇವವಾಣಿ, ಆಪ್ತವಾಣಿ, ಗೀರ್ವಾಣವಾಣಿ ಮುಂತಾಗಿ ಪವಿತ್ರ ನಾಮಗಳಿಂದ ಗೌರವಿಸಲಾಗಿದೆ. ಇಂತಹ ಚಿರನೂತನ ಭಾಷೆಯನ್ನು 'ಮೃತ ಭಾಷೆ' ( Dead language ) ಎಂದು ಕರೆಯುವುದು, ಗುಣವನ್ನು ಅಗೌರವಿಸಿದಂತೆ; ಅದಕ್ಕಿಂತಲೂ ಅಧಿಕವಾಗಿ ನಮ್ಮ ಮೂರ್ಖತನದ ಮೆರವಣಿಗೆಯನ್ನು ಮಾಡಿಕೊಂಡಂತೆ ! ಸಂಸ್ಕೃತ ಭಾಷೆಯ ಮಹತ್ತ್ವ ಕಡಮೆಯಾದಂತೆ, ಭಾರತೀಯ ನಾಗರಿಕತೆ, ಸುಸಂಸ್ಕೃತಿಗಳ ಮಟ್ಟವೂ ಕೆಳಗೆ ಇಳಿಯುತ್ತಿದೆ ಎಂಬುದು ವಿಚಾರವಂತರಿಗೆ ಹೊಳೆಯದಿರದು.

ಹೀಗೆ ಹೇಳಿದ ಮಾತ್ರಕ್ಕೆ, ಅನ್ಯಭಾಷೆಗಳು ಅಸಂಸ್ಕೃತ, ಅಪರಿಪೂರ್ಣ ಎಂದು ಹೇಳುವ ಉದ್ದೇಶ ನಮ್ಮದಲ್ಲ. ದ್ರಾವಿಡ ಭಾಷೆಯಲ್ಲಿ ಆಧ್ಯಾತ್ಮಿಕ – ಭೌತಿಕ ಮಹಾಶಾಸ್ತ್ರಗಳಿಲ್ಲವೆ ? ಲಲಿತ ಸಾಹಿತ್ಯ ಸಮೃದ್ಧಿಯಿಲ್ಲವೇ ? ಎಂದು ಕೇಳುವವರೂ ಉಂಟು. ಅವರ ಆಕಾಂಕ್ಷೆಗೆ ಆನಂದದಿಂದ ಸಮ್ಮತಿಯನ್ನು ಸೂಚಿಸುತ್ತೇವೆ. ಆದರೆ, ಅದೇ ಪ್ರಸಂಗದಲ್ಲಿ, ಅನ್ಯಭಾಷಾ ಸಂಪ್ರದಾಯದ ಮಹಾನುಭಾವರು ಮೊತ್ತಮೊದಲಿಗೆ ಸಂಸ್ಕೃತ ಸಾಹಿತ್ಯಗಳನ್ನು ಆಳವಾಗಿ ಅಭ್ಯಸಿಸಿದ್ದರೆಂಬುದನ್ನೂ ಅದರ ಬಲ

ದಿಂದಲೇ ವಾಙ್ಮಯ ಸಾಹಿತ್ಯ – ಸೃಷ್ಟಿಗಳ ಸ್ಫೂರ್ತಿಯನ್ನು ಪಡೆದರೆಂಬುದನ್ನೂ ಹೇಳಬಯಸುತ್ತೇವೆ. ಮುಂದೆ ಕಾಲಮಾನಕ್ಕೆ ತಕ್ಕಂತೆ ಹೊಸ ಹೊಸ ವಿಚಾರ – ವಿಧಾನಗಳನ್ನು ತಮ್ಮ ಕೃತಿಗಳಲ್ಲಿ ಸೇರಿಸಿರಬಹುದು. ಬದಲಾಗುತ್ತಿರುವ ಜಗತ್ತಿನಲ್ಲಿ ಇದು ಸಹಜ ಸತ್ಯವೇ ಎನ್ನೋಣ. ಎಂದ ಮಾತ್ರಕ್ಕೆ, ಆರಂಭದಲ್ಲಿ ಅವರು ಪಡೆದ ಸಂಸ್ಕೃತ ಭಾಷಾ ಪರಿಣತಿಯ ಋಣವನ್ನು ಮರೆಯುವಂತಿಲ್ಲ.

ಇಂತಹ ಅಮೌಲ್ಯ ಸಂಸ್ಕೃತ ಭಾಷೆ ಇಂದು– ದೇಶವಿದೇಶಗಳ ಮಾತು ಹಾಗಿರಲಿ– ಭಾರತದಲ್ಲಿಯೇ ಅನವಸ್ಥೆ ದುರವಸ್ಥೆಗಳಿಗೆ ಈಡಾಗಿದೆ. ಇದರಿಂದ ಭಾರತೀಯ ಜನಜೀವನದ ಪ್ರಗತಿಗೆ ಬಹುಮುಖವಾದ ಬರಡುತನ ಬಂದಿದೆ ಎಂದು ಆಧುನಿಕ ಜನನಾಯಕರು ಕಂಡು ಕೊಂಡಿದ್ದಾರೆ. ಆದಕ್ಕಾಗಿಯೇ, ಸಂಸ್ಕೃತ ಭಾಷೆಯ ಪುನರುಜ್ಜೀವನ ಪುನಾರಚನೆಗಳ ಸಲುವಾಗಿ ದೇಶದಾದ್ಯಂತ ಬಗೆಬಗೆಯ ಚಟುವಟಿಕೆಗಳನ್ನು ಆರಂಭಿಸಿದ್ದಾರೆ. ಅವರ ಮಹಾಸೇತು ಬಂಧನ ಕಾರ್ಯದಲ್ಲಿ ನಮ್ಮ '**ಸಂಸ್ಕೃತ ಸಾಹಿತ್ಯ ಸುಧಾ**' ಪುಸ್ತಕಮಾಲೆ '**ಅಳಿಲುಸೇವೆ**'.

ಮೂರು ವರುಷಗಳ ಬುದ್ಧಿ ನೂರು ವರುಷಗಳ ವರೆಗೆ— ಎಂದು ಕನ್ನಡದಲ್ಲಿ ನಾಣ್ಣುಡಿ. ಎಳೆಯ ಗಿಡದ ಮೇಲೆ ಕೆತ್ತಿದ ಅಕ್ಷರಗಳು, ಗಿಡದ ಬಳವಮೆಯೊಡನೆ ಬೆಳೆಯುತ್ತಲೇ ಹೋಗುತ್ತಿವೆ, ಎಂಬುದು ಅನುಭವ ವೇದ್ಯ. ಈ ಕಾರಣದಿಂದ ಪ್ರಾಥಮಿಕ ಶಾಲೆಯ ಮಕ್ಕಳಿಂದ ಹಿಡಿದು ಅಕ್ಕರಿಗರಾದ ಮುಪ್ಪಿನವರ ವರೆಗೂ ಓದಲು ಅನುಕೂಲವಾಗುವಂತೆ, ತಿಳಿಗನ್ನಡ ನುಡಿ ಬಟ್ಟಲಿನಲ್ಲಿ ಸಂಸ್ಕೃತ ಸಾಹಿತ್ಯದ ಮಹಾಮಹಾ ಕವಿಗಳ ಸಾಹಿತ್ಯ ಸುಧೆಯ ಸಾರವನ್ನು ಕನ್ನಡ ಕಥಾರೂಪದಲ್ಲಿ ಸುರಿಯಲಾಗಿದೆ. ಇದರ ಸ್ವಾದ – ಸೌಂದರ್ಯಗಳಿಂದ ಸರ್ವರೂ ಸಂತೋಷ ಪಡಬೇಕೆಂಬುದೇ ನಮ್ಮ ಹೆಬ್ಬಯಕೆ.

ಪಂಚ ಮಹಾಕಾವ್ಯಗಳಲ್ಲಿ ಕಿರಾತಾರ್ಜುನೀಯ ಕಾವ್ಯಕ್ಕೆ ಶ್ರೇಷ್ಠಸ್ಥಾನವಿದೆ. ಇದನ್ನು ಸೃಷ್ಟಿಸಿದವನು '**ಭಾರವಿ**' ಮಹಾಕವಿ. ಈ ಕಾವ್ಯದಲ್ಲಿಯ ಅರ್ಥದ ಗೌರವ ಸಂಸ್ಕೃತ ಸಾಹಿತ್ಯ ಸೃಷ್ಟಿಯಲ್ಲಿಯೇ ದುರ್ಮಿಳ. ಎಂತೆಯೇ, 'ಭಾರವೇಃ ಅರ್ಥಗೌರವಮ್' ಎಂಬ ಸುಭಾಷಿತ ಹುಟ್ಟಿಕೊಂಡಿದೆ. ಈ ಮಹಾಕವಿಯ 'ಸಹಸಾ ವಿದಧೀತ ನಕ್ರಿಯಾಂ, ಅವಿವೇಕಃ ಪರಮಾಪದಾಮ್ ಪದಮ್ .. ......' ಅಮೃತವಾಣಿ ಜಾಗತಿಕ ಸತ್ಯವೆನಿಸಿದೆ. ಇದನ್ನೇ ಆಧರಿಸಿ ಕೆಲವು ನಾಟಕಗಳು ಕೂಡ ಹುಟ್ಟಿವೆ.

ಪರಶಿವನ ಪಂಚವಿಂಶತಿ ಲೀಲೆಗಳಲ್ಲಿ ಒಂದಾದ 'ಶಬರ ಶಂಕರ' ಅವತಾರವೇ ಈ ಕಾವ್ಯದ ಕಥಾವಸ್ತು. ಪಾರ್ಥನ ಶಕ್ತಿ – ಭಕ್ತಿಗಳಿಗೆ ಮೆಚ್ಚಿ, ಪರಶಿವ ಪಾಶುಪತಾಸ್ತ್ರ ವರದಾನ ಮಾಡುತ್ತಾನೆ ಆತನಿಗೆ. ಇದೊಂದೇ ವಾಕ್ಯವನ್ನು ಮಹಾಕಾವ್ಯದ ಮಟ್ಟಕ್ಕೆ ಹಿಗ್ಗಿಸಿ ಬರೆದಿರುವ ಕವಿಯ ಕಲ್ಪನಾ, ಪ್ರತಿಭೆಗಳನ್ನು ಬಣ್ಣಿಸಿದಷ್ಟೂ ಕಡಮೆಯೇ ಅಲ್ಲವೇ ?

ಕವಿಯ ಮೂಲಕೃತಿಗೆ ಅನ್ಯಾಯ-ಅಪಚಾರಗಳಾಗದಂತೆ, ಅದರಲ್ಲಿ ನಮ್ಮದೇನನ್ನೂ ಬೆರೆಸದಂತೆ, ಸಾರದ ಪಾಕವನ್ನು ಕನ್ನಡದಲ್ಲಿ ಇಳಿಸಿದೆ. ಕುಂದು-ಕೊರತೆಗಳನ್ನು ರಸಜ್ಞರು ಸಹೃದಯತೆಯಿಂದ ಸೂಚಿಸಿದರೆ, ಕೃತಜ್ಞತೆಯಿಂದ ಸ್ವೀಕರಿಸಿ ಮುಂದಿನ ಮುದ್ರಣದಲ್ಲಿ ಸರಿಪಡಿಸುತ್ತೇನೆ.

ಸಾಧನಕೇರಿ, ಧಾರವಾಡ — ಷಂ. ಕವಲಿ

೧೫ – ೮ – ೧೯೬೧

ಭಾರವಿ ಮಹಾಕವಿಯ

# ಕಿರಾತಾರ್ಜುನೀಯಂ

(ಕಾವ್ಯಸಾರ)

## ೧. ಗುಪ್ತಚರನ ವರದಿ

ಪಾಂಡವರು ಪಗಡೆಯಾಟದಲ್ಲಿ ದೇಶ–ಕೋಶ ಎಲ್ಲವನ್ನೂ ಕೌರವರಿಗೆ ಸೋತರು. ಆಟದ ಮೊದಲು ಕಟ್ಟು ಮಾಡಿಕೊಂಡಂತೆ ಹನ್ನೆರಡು ವರ್ಷ ವನವಾಸಕ್ಕೆ ಹೊರಟರು. ದುರ್ಯೋಧನ ಪಾಂಡವ–ಕೌರವ ರಾಜ್ಯಕ್ಕೆ ಒಬ್ಬನೇ ಒಡೆಯನಾದ. ವೈಭವದಿಂದ ಮೆರೆಯು ಹತ್ತಿದ.

ಪಾಂಡವರು ಅರಸು ಮಕ್ಕಳು. ಅರಮನೆಯಲ್ಲಿ ಅರಗಿಳಿಗಳಂತೆ ಬೆಳೆದವರು. ಅವರ ಹೆಂಡತಿ ದ್ರೌಪದಿ ಹುಟ್ಟಿದ ಮನೆಯಲ್ಲಿಯೂ ಕೊಟ್ಟ ಮನೆಯಲ್ಲಿಯೂ ಹೂವಿನ ಹಾಸುಗೆಯಲ್ಲಿಯೇ ಬೆಳೆದಿದ್ದಳು. ಆದರೆ ಧರ್ಮರಾಜನ ಜೂಜಿನಾಟದಿಂದ ಅವಳಿಗೆ ಬರಬಾರದ ಬವಣೆ ಬಂದಿತು; ಆಗಬಾರದ ಅಪಮಾನವಾಯಿತು! ಅವರೆಲ್ಲರೂ ಕಾಡಿನಲ್ಲಿ ಪಟ್ಟ, ಪಡುತ್ತಿದ್ದ ಕಷ್ಟಗಳನ್ನು ಹೇಳತೀರದು. ಉಣ್ಣುವುದಕ್ಕಿಲ್ಲ, ಉಡುವುದಕ್ಕಿಲ್ಲ; ಹಾಸುವುದಕ್ಕಿಲ್ಲ, ಹೊದೆಯುವುದಕ್ಕಿಲ್ಲ! ಮುಂದೆ ಎಂದಾದರೂ ಸುಖದ ದಿವಸಗಳನ್ನು ಕಂಡೇವು– ಇದೊಂದೇ ಆಸೆಯಿಂದ ಬದುಕಿದ್ದರು. ಆದರೆ, ಸುಖ ತಾನಾಗಿಯೇ ಬರುತ್ತಿದೆಯೇ? ಅದನ್ನು ದೊರಕಿಸಲು ದೈವದ ಬೆಂಬಲಬೇಕು; ಅದಕ್ಕೆ ತಕ್ಕಂತೆ ಮನುಷ್ಯ ಪ್ರಯತ್ನವೂ ಬೇಕು. ಧರ್ಮರಾಜನಿಗೆ ಇದೆಲ್ಲ ಗೊತ್ತು. ತನ್ನ ಪ್ರಯತ್ನಗಳನ್ನು ಆರಂಭಿಸುವ ಮೊದಲು, ಆತನು

ಕೌರವನ ಆಡಳಿತದ ಒಳ – ಹೊರಗುಗಳನ್ನು ತಿಳಿದುಕೊಳ್ಳಬೇಕಾಗಿತ್ತು. ಈ ಉದ್ದೇಶಕ್ಕೆ ತಕ್ಕಂತೆ, ಗೂಢಚಾರ (ಪತ್ತೇದಾರ) ನೊಬ್ಬನನ್ನು ಹಸ್ತಿನಾವತಿಗೆ ಕಳಿಸಿಕೊಟ್ಟ.

ಗೂಢಚಾರ ಬ್ರಹ್ಮಚಾರಿಯ ವೇಷದಿಂದ ಕೌರವನ ರಾಜ್ಯದಲ್ಲೆಲ್ಲ ಅಡ್ಡಾಡಿದ; ಆಡಳಿತದ ಅಂತರಂಗ-ಬಹಿರಂಗಗಳನ್ನು ತಿಳಿದುಕೊಂಡ. ಅವೆಲ್ಲವನ್ನೂ ತನ್ನ ಸ್ವಾಮಿ ಧರ್ಮರಾಜನಿಗೆ ಅರಿಕೆ ಮಾಡಬೇಕಾಗಿತ್ತು; ಅವನು— ಅದೇ ವೇಷದಲ್ಲಿಯೇ ದ್ವೈತವನಕ್ಕೆ ಬಂದ; ಧರ್ಮರಾಜನ ಇದಿರಿಗೆ ತನ್ನ ವರದಿಯನ್ನು ಒಪ್ಪಿಸಹತ್ತಿದ. ಅವನ ಮಾತು ಸತ್ಯವಾಗಿದ್ದುವು, ಸುಂದರವಾಗಿದ್ದುವು, ಪ್ರಿಯವಾಗಿದ್ದುವು:

ಮಹಾರಾಜರೇ, ರಾಜದೂತರು ದೊರೆಗಳ ಕಣ್ಣು ಇದ್ದ ಹಾಗೆ. ಕಣ್ಣು ತನ್ನ ಒಡೆಯನಿಗೆ ತಪ್ಪು ದಾರಿಯನ್ನು ತೋರಿಸಬಾರದು. ನನ್ನ ಮಾತು ಸಿಹಿಯಾಗಿರಬಹುದು, ಕಹಿಯಾಗಿರಬಹುದು; ಆದರೂ ಸತ್ಯಪೂರ್ಣವಾಗಿವೆ. ಸಿಹಿ ಎನಿಸಿದರೆ ಸ್ವೀಕರಿಸಬೇಕು; ಕಹಿ ಎನಿಸಿದರೆ ಕ್ಷಮಿಸಬೇಕು.

ಒಡೆಯರೇ, ತಾವು ಕಾಡಿನಲ್ಲಿ ಕಷ್ಟಗಳನ್ನು ಕಾಣುತ್ತಿದ್ದೀರಿ. ದುರ್ಯೋಧನ ದೊರೆಯಾಗಿ ಸೀಮೆಯಿಲ್ಲದ ಸುಖವನ್ನು ಸವಿಯುತ್ತಿದ್ದಾನೆ. ಆದರೂ ನೀವು ಎಂದಾದರೂ ಅವನನ್ನು ಗೆಲ್ಲಬಹುದು, ಎಂಬ ಭೀತಿ ಅವನಿಗೆ ಇದ್ದೇ ಇದೆ. ಈ ಕಾರಣದಿಂದ, ಅಂದು ನಿಮ್ಮನ್ನು ಮೋಸಗೊಳಿಸಿ ಗೆದ್ದ ಭೂಮಿಯನ್ನು, ಈಗ ನೀತಿಯಿಂದ ಪ್ರೇಮದಿಂದ ಗೆಲ್ಲಲು ಹವಣಿಸುತ್ತಿದ್ದಾನೆ. ನಿಮಗಿಂತಲೂ ಶ್ರೇಷ್ಠನೆಂದು ತೋರಿಸಿಕೊಳ್ಳಬೇಕಾಗಿದೆ ಅವನಿಗೆ. ಕಾರಣ, ಸಭ್ಯತನದ ಉದಾರತನದ ನೀತಿ–ನಿಯಮಗಳ ಬಲೆಯಲ್ಲಿ ಪ್ರಜೆಗಳನ್ನು ಹಿಡಿಯ ಬಯಸುತ್ತಿದ್ದಾನೆ. ಇದು ಆತನಿಗೆ ಒಳ್ಳೆಯದೆಂದೇ ಹೇಳಬೇಕು. ದುರ್ಬಲರೊಡನೆ ಗೆಳತನವನ್ನು ಬಳಸುವುದರಿಂದೇನು ? ಪ್ರಬಲರೊಡನೆ ಹಗೆತನದ ಹೋರಾಟವನ್ನು ನಡೆಸುವುದರಿಂದ ಆತ್ಮೋನ್ನತಿಗೆ ಹಾದಿ ಸಿಕ್ಕುವುದು. ಶತ್ರುಗಳನ್ನು ಗೆಲ್ಲಬೇಕೆನುವವನಿಗೆ ಮನುಮುಹರ್ಷಿ

ಕ್ರೋಧವೇ ಮೊದಲಾಗಿ ಆರು ನಿಯಮಗಳನ್ನು ಹೇಳಿದ್ದನಷ್ಟೇ. ದುರ್ಯೋಧನ ಹಗಲು – ರಾತ್ರಿಗಳೆನ್ನದೆ ಅವುಗಳನ್ನು ಬಳಕೆಯಲ್ಲಿ ತರಲು ಹೆಣಗುತ್ತಿದ್ದಾನೆ.

ಆಸ್ಥಾನದಲ್ಲಿ ಎಲ್ಲರೊಡನೆ ನಯ–ವಿನಯಗಳಿಂದ ನಡೆಯುತ್ತಾನೆ. ಸೇವಕರನ್ನು ಮಿತ್ರರಂತೆ, ಮಿತ್ರರನ್ನು ಆಪ್ತರಂತೆ, ಆಪ್ತರನ್ನು ಕೇವಲ ತನ್ನಂತೆ ನೋಡಿಕೊಳ್ಳುತ್ತಾನೆ. ಧರ್ಮ–ಅರ್ಥ–ಕಾಮಗಳು ಸಮ ರಸ ಭಾವದಿಂದ ಆತನಲ್ಲಿ ಒಗ್ಗೂಡಿವೆ. ಆತನ ರಾಜದಂಡದ ಬಲ ಪ್ರಯೋಗ ನಿಂತುಹೋಗಿದೆ. ನ್ಯಾಯ ನಿರ್ಣಯವನ್ನು ನ್ಯಾಯಾಧೀಶರಿಗೆ ಒಪ್ಪಿಸಿದ್ದಾನೆ. ಅವರು ಅಪರಾಧಿ ಸಾಮಾನ್ಯ ಪ್ರಜೆಯೇ ಇರಲಿ ರಾಜವಂಶದವನೇ ಇರಲಿ– ಅನ್ಯಾಯಕ್ಕೆ ತಕ್ಕ ಶಿಕ್ಷೆ ಕೊಡುತ್ತಾರೆ. ಅರಸನ ಕೀರ್ತಿ ದೂರ ದೂರ ಹಬ್ಬಿದೆ. ಸಾಮಂತರಾಜರು ಆನೆಗಳ ಮೇಲೆ ಹೇರಿ ಹೇರಿ ಕಪ್ಪಕಾಣಿಕೆಗಳನ್ನು ಕಳಿಸುತ್ತಿದ್ದಾರೆ. ಆ ಆನೆಗಳ ಮದಜಲದಿಂದ ಆಸ್ಥಾನದ ಅಂಗಣವೆಲ್ಲ ತೊಯ್ದು ರಾಡಿಯಾಗಿರುತ್ತದೆ. ರಾಜ್ಯದಲ್ಲಿ ಹಳ್ಳ – ಹೊಳೆಗಳಿಗೆ ಅಣೆಕಟ್ಟುಗಳನ್ನು ಕಟ್ಟಿಸಲಾಗಿದೆ. ಪರಿಣಾಮವಾಗಿ, ಒಕ್ಕಲಿಗರು ವರ್ಷದಲ್ಲಿ ಎರಡು ಮೂರು ಬೆಳೆ ತೆಗೆದುಕೊಳ್ಳುತ್ತಾರೆ. ಪ್ರಜೆಗಳೆಲ್ಲ ಉಂಡುಟ್ಟು ಸುಖದಿಂದ ಇದ್ದಾರೆ; ಪ್ರಭುವಿನ ಕಲ್ಯಾಣ ಕೃತಿಯನ್ನು ಹೊಗಳುತ್ತಿದ್ದಾರೆ. ಸಂರಕ್ಷಣ ವ್ಯವಸ್ಥೆ ತುಂಬಾ ಸಮರ್ಥವಾಗಿದೆ. ಪ್ರಜೆಗಳ ಆಸ್ತಿ ಜೀವಿತಗಳಿಗೆ ಕಳ್ಳ – ಕಾಕರ ಭಯವೇ ಇಲ್ಲ. ಪಶುಸಂಪತ್ತಿಯ ಆರೈಕೆ ಚೆನ್ನಾಗಿದೆ. ಅವುಗಳು ಸಂತುಷ್ಟವಾಗಿ ನಿತ್ಯವೂ ಕೊಡಗಟ್ಟಲೆ ಹಾಲು ಕರೆಯುತ್ತಿವೆ. ಹಾಲಿನ ಪೂರಯಿಕೆಯ ಬಲದಿಂದ ಸೈನಿಕರು ಧನುರ್ಧಾರಿ ವೀರರು ಕೆಚ್ಚಿನ ಕಾದಾಳುಗಳಾಗಿದ್ದಾರೆ. ರಾಜ್ಯ ಕಾರ್ಯಭಾರದ ಹೊರೆ ದುಃಶಾಸನ ಕಡೆಗಿದೆ. ಅರಸು ಮಾತ್ರ ಯಜ್ಞ – ಯಾಗಾದಿಗಳಲ್ಲಿ ಪುರೋಹಿತರೊಡನೆ ವೇಳೆ ಕಳೆಯುತ್ತಾನೆ. ಅವನೊಬ್ಬ ರಾಜರ್ಷಿ ಎಂದು ತೋರುತ್ತಿದ್ದಾನೆ ಜನಗಳಿಗೆ. ಒಟ್ಟಾರೆ, ದುರ್ಯೋಧನನಿಗೆ ಕಡಲುಡಿಗೆಯ ಪೊಡವಿಯ ಒಡೆತನವಿದೆ. ಸಾಮಂ

ತರು ಸ್ವಯಂ ಸ್ಫೂರ್ತಿಯಿಂದ ಆತನ ಅಂಕಿತದಲ್ಲಿದ್ದಾರೆ; ಹೇರಳವಾಗಿ ಕಪ್ಪಗಾಣಿಕೆಗಳನ್ನು ಒಪ್ಪಿಸುತ್ತಿದ್ದಾರೆ. ಪ್ರಜೆಗಳೆಲ್ಲರೂ ಆಡಳಿತವನ್ನು ಮನವಾರೆ ಹೊಗಳುತ್ತಿದ್ದಾರೆ. ಇದೆಲ್ಲವೂ ಸರಿಯೇ ಹೊರನೋಟಕ್ಕೆ. ಆದರೆ ಅವನ ಅಂತರಂಗದಲ್ಲಿ ಹೊಯ್ದಾಟ ತಪ್ಪಿದಂತಿಲ್ಲ. ನಿಮ್ಮಿಂದ ಭವಿಷ್ಯತ್ ಕಾಲದಲ್ಲಿ ಬರಬಹುದಾದ ಭೀತಿಯೇ ಅವನ ಉದಾಸೀನತೆಗೆ ಕಾರಣವಿರಬೇಕು. ಪ್ರಬಲರೊಡನೆ ವೈರವನ್ನು ಬೆಳೆಸಿದವನಿಗೆ ಸಮಾಧಾನ ಸಿಕ್ಕೀತಾದರೂ ಹೇಗೆ? ವೀರಾಧಿ ವೀರರಾದ ಭೀಮಾರ್ಜುನರು ಅವನ ಕಣ್ಣು ಮುಂದೆ ಕಟ್ಟಿ ಕರೆಯುತ್ತಿರಬೇಕು.

ಪ್ರಭುಗಳೇ, ನನಗೆ ತಿಳಿದುದನ್ನು ಅರಿಕೆ ಮಾಡಿಕೊಂಡಿರುವೆ. ತಾವು ನೀತಿ – ನ್ಯಾಯಗಳ ಗುಟ್ಟನ್ನು ಬಲ್ಲವರು. ಯಾವ ಕಾಲಕ್ಕೆ ಏನು ಮಾಡಬೇಕು— ಇದು ತಮಗೆ ಚೆನ್ನಾಗಿ ತಿಳಿದಿದೆ. ಆದರೂ ನನ್ನ ಕೊನೆಯ ಪ್ರಾರ್ಥನೆಯೆಂದರೆ— ದುರ್ಯೋಧನ ಬಹಿರಂಗದಲ್ಲಿ ಇಷ್ಟೆಲ್ಲ ಆಡಂಬರವನ್ನು ಇಟ್ಟಿರುವುದೇಕೆ? ಹೇಗಾದರೂ ಪಾಂಡವರ ಮೇಲೆ ಹಗೆತನವನ್ನು ತೀರಿಸಿಕೊಳ್ಳಬೇಕೆಂದಿದ್ದಾನೆ. ಅದಕ್ಕೆ ಪ್ರತೀಕಾರ ಮಾಡುವುದೂ ಬಿಡುವುದೂ ಪ್ರಭುಗಳ ಚಿತ್ತ.

ಕಾಡಾಡಿ ಸೇವಕನ ಮಾತು ಮುಗಿಯಿತು. ಧರ್ಮರಾಜ ಆತನಿಗೆ ಸಮಯಕ್ಕೆ ತಕ್ಕ ಮೆಚ್ಚುಕೊಟ್ಟು ಕಳಿಸಿದ. ಆ ಮೇಲೆ ತಾನು ದ್ರೌಪದಿಯ ವಸತಿಯನ್ನು ಹೊಕ್ಕ. ಅಲ್ಲಿಯೇ ಎಲ್ಲ ತಮ್ಮಂದಿರನ್ನು ಕರೆಸಿಕೊಂಡ. ಅವರಿಗೆ ಗುಪ್ತಚಾರನ ವರದಿಯನ್ನು ವಿವರಿಸಿದ.

—

## ೨. ದ್ರೌಪದಿಯ ಕೆಣಕು ನುಡಿ

ಶತ್ರುಗಳ ಸುಖವಾರ್ತೆಯನ್ನು ಕೇಳಿ ದ್ರೌಪದಿಯ ಕರುಳಿಗೆ ಬರೆ ಕೊಟ್ಟಂತಾಯಿತು. ಆಕೆಗೆ ಹಿಂದಾದ ಅಪಮಾನಗಳೆಲ್ಲ ಒಮ್ಮೆಲೆ ಒಟ್ಟಾಗಿ ಹೊಟ್ಟೆಯಲ್ಲಿ ಉರಿಯನ್ನು ಎಬ್ಬಿಸಿದುವು. ಆ ತಳಮಳದಲ್ಲಿ

ತಾಳ ತಪ್ಪದಂತೆ ಧರ್ಮದೇವನನ್ನು ಕುರಿತು ಮಾತನಾಡಿದಳು. ಪತಿಗಳೈವರ ಪರಾಕ್ರಮ ಪುರುಷಾರ್ಥ ಪ್ರತಾಪಗಳನ್ನು ಕೆಣಕುವುದೇ ಅವಳ ಉದ್ದೇಶವಾಗಿತ್ತು.

ಧರ್ಮದೇವಾ, ತಾವು ಮಹಾ ವಿದ್ವಾಂಸರು; ನಾನು ಶೂನ್ಯ ಮತಿಯ ಸಾಮಾನ್ಯ ಸ್ತ್ರೀ. ತಮಗೆ ನಾನು ಉಪದೇಶ ಮಾಡುವುದೆಂದರೆ, ದಿಟ್ಟತನದ ಮೇರೆಯನ್ನು ಮೀರಿದಂತೆ ಎನಿಸೀತು. ನಮ್ಮ ಮೇಲೆ ಬಂದಿರುವ ಆಪತ್ತುಗಳು ಒಂದಲ್ಲ, ಎರಡಲ್ಲ. ಅವುಗಳ ಕಹಿ ನೆನಹು ನನ್ನ ಕರುಳನ್ನು ಕಿವಿಚುತ್ತಲಿದೆ. ಅದರಿಂದ, ಸ್ತ್ರೀ ಸಹಜವಾದ ಲಜ್ಜೆಯನ್ನು ಬದಿಗಿರಿಸಿ ಮಾತನಾಡುತ್ತಿದ್ದೇನೆ. ಕ್ಷಮಿಸಬೇಕು.

ಮಹಾರಾಜರೇ, ಪಟ್ಟದಾನೆ ಮದ ಬಂದಾಗ, ತನ್ನ ತಲೆಯ ಮೇಲಿನ ಮಾಲೆಯನ್ನು ಕಿತ್ತು ಎತ್ತಲೋ ಎಸೆಯುತ್ತದೆಂತೆ. ಇಂದ್ರಾದಿ ದೇವತೆಗಳಂತೆ ತೇಜಸ್ವಿಗಳೂ ಪರಾಕ್ರಮಿಗಳೂ ಆದ ಪೂರ್ವಜರಿಂದ ನಿಮಗೆ ವಿಶಾಲ ರಾಜ್ಯ ದೊರೆತಿತ್ತು. ನೀವೂ ಪ್ರಬಲ ಪರಾಕ್ರಮಿಗಳು. ಆದರೂ ಸೊಕ್ಕಾನೆಯಂತೆ ಜೂಜಿನ ಮತ್ತಿನಲ್ಲಿ, ದೇಶ–ಕೋಶಗಳನ್ನು ಕೌರವನ ಮೇಲೆ ಚೆಲ್ಲಿಬಿಟ್ಟಿರಿ. ಮೋಸಗಾರರ ಮೋಸವನ್ನು ಮೋಸಗಾರಿಕೆಯಿಂದಲೇ ಇದಿರಿಸಬೇಕು; ಇಲ್ಲವಾದರೆ ಬಾಳ ಹೋರಾಟದಲ್ಲಿ ಸೋಲು ಸಿದ್ಧ— ಎಂದು ನೀತಿ ಶಾಸ್ತ್ರ ಹೇಳುತ್ತಿದೆ. ಕವಚವಿಲ್ಲದ ಮೈಯಲ್ಲಿ ವೈರಿಗಳ ಬಾಣಗಳು ಸಹಜವಾಗಿಯೇ ನೆಡುತ್ತಿವೆ. ಹಾಗೆಯೇ, ಸಜ್ಜನರು ಮೈಮರೆತಾಗ ದುಷ್ಟರು ಅವರ ನಾಶಮಾಡಿ ಬಿಡುತ್ತಾರೆ.

ವಿಚಾರ ಮಾಡಿರಿ: ನಿಮಗೆ ಸಾಧನ – ಸಂಪತ್ತಿಯ ಕೊರತೆಯಿರಲಿಲ್ಲ; ನಿಮ್ಮಲ್ಲಿ ಕ್ಷಾತ್ರ ಕುಲಾಭಿಮಾನವೂ ಕಡಿಮೆಯಾಗಿರಲಿಲ್ಲ. ಎಂತೆಯೇ, ನಿಮ್ಮ ಗುಣಗಳಿಗೆ ಮರುಳಾಗಿ ರಾಜ್ಯಲಕ್ಷ್ಮಿ ಪರಂಪರಾಗತವಾಗಿ ಬಂದಿದ್ದಳು. ಇಂತಹ ಸಾಧ್ವಿಯಾದ ಸತಿಯನ್ನು ಹೆರವರಿಗೆ ಒಪ್ಪಿಸಿದಿರಿ. ನಿಮ್ಮ ಹೊರತು ಬೇರೆ ಯಾರು ಮಾಡಿಯಾರು,

ಈ ನಿಂದ್ಯ ಕರ್ಮವನ್ನು ? ನಿಮ್ಮಲ್ಲಿ ಶೂರತನದ ಕೆಚ್ಚು ಕಡಿಮೆಯಿಲ್ಲ. ಅದೆಲ್ಲ, ಬನ್ನಿಯು ಮರದಲ್ಲಿ ಅಡಗಿದ ಅಗ್ನಿಯಂತೆ ತಣ್ಣಗೆ ಕುಳಿತಿದೆ. ಅದನ್ನೇಕೆ ಉರಿಸುವುದಿಲ್ಲ? ಯಾರ ಸಿಟ್ಟು ವ್ಯರ್ಥವಾಗುವುದಿಲ್ಲವೋ ಅವರ ಆಪತ್ತು ತಡವಿಲ್ಲದೆ ಅಡಗುತ್ತಿವೆ; ಮತ್ತು ಪ್ರಜೆಗಳು— ಅವರ ವಶದಲ್ಲಿಯೇ ಇರುತ್ತಾರೆ. ಯಾರು ಅಪಮಾನ ಹೊಂದಿದರೂ ಕುಪಿತರಾಗುವುದಿಲ್ಲವೋ ಅವರಿಗೆ ಮಿತ್ರರು ಮನ್ನಣೆ ಕೊಡುವುದಿಲ್ಲ; ಹಗೆಗಳು ಹೆದರುವುದಿಲ್ಲ.

ಪ್ರಭೋ, ನಿಮ್ಮ ತಮ್ಮಂದಿರನ್ನು ನೋಡಿರಿ: ರಕ್ತಚಂದನವನ್ನು ಲೇಪಿಸಿಕೊಳ್ಳಬೇಕಾಗಿದ್ದ ಭೀಮದೇವನ ಪಾದಗಳು ಅಡವಿಯ ಕಲ್ಲು, ಮುಳ್ಳುಗಳ ತುಳಿತದಿಂದ ಕೆಂಪಾಗಿವೆ. ಅದು ನಿಮ್ಮ ಚಿತ್ತದಲ್ಲಿ ಕಳ ವಳವನ್ನು ಹುಟ್ಟಿಸುವುದಿಲ್ಲವೇ ? ಉತ್ತರ ಕುರುದೇಶವನ್ನು ಗೆದ್ದು, ತೇಜಸ್ವಿ ಅರ್ಜುನದೇವ ನಿಮ್ಮ ಪಾದತಲದಲ್ಲಿ ಮುತ್ತು – ರತ್ನಗಳ ಅಪಾರ ಸಂಪತ್ತಿಯನ್ನೇ ಸುರುವಿದ. ಆತನೀಗ ನಾರು ಬಟ್ಟೆಗಳನ್ನು ಉಡುತ್ತಿದ್ದಾನೆ. ಇದು ನಿಮ್ಮ ಕೋಪವನ್ನು ಕೆರಳಿಸುವುದಿಲ್ಲವೇ ? ಧೃತಿ ಮತ್ತು ಸಂಯಮಗಳೇ ಮೂರ್ತಿಯಾಗಿರುವ ನಕುಲ – ಸಹ ದೇವರು ಕಾಡಿನಲ್ಲಿ ಕಲ್ಲು – ಮುಳ್ಳುಗಳ ಮೇಲೆ, ಸೊಕ್ಕಾನೆಗಳಂತೆ ಸಂಚರಿಸುತ್ತಿದ್ದಾರೆ. ಅವರ ಕೆದರಿದ ಕೇಶರಾಶಿಯು ಗಾಳಿ ನಿಮ್ಮ ಎದೆ ಯನ್ನು ಅಲ್ಲಾಡಿಸುವುದಿಲ್ಲವೇ ?

ಸ್ವಾಮೀ, ಈಗ ನಿಮ್ಮ ದೇಹವನ್ನೇ ನೋಡಿಕೊಳ್ಳಿರಿ. ಆಗ ಅರಮನೆಯಲ್ಲಿ ನಿತ್ಯವೂ ಪಂಚ–ಪಕ್ವಾನ್ನಗಳಿಂದ ಬೆಲೆಯುಳ್ಳ ಬಟ್ಟೆ ಗಳಿಂದ ಭೂದೇವತೆಗಳನ್ನು ಸಂತೋಷಗೊಳಿಸುತ್ತಿದ್ದಿರಿ. ಅವರ ಪ್ರಸಾದ ಸೇವನೆಯಿಂದ ನಿಮ್ಮ ಮೈ ಕೈ ಮಿರಿ ಮಿರಿ ಮಿಂಚುತ್ತಿದ್ದುವು. ಈಗ ಕಾಡಿನಲ್ಲಿಯ ಕಂದ–ಮೂಲಗಳನ್ನು ತಿಂದು ಕಾಯ ಕಡ್ಡಿಯಾಗಿ ಹೋಗಿದೆ. ಸಾಮಂತರ ಕಿರೀಟಗಳಲ್ಲಿಯ ರತ್ನಗಳಿಂದ ಬೆಳಗುತ್ತಿದ್ದ ಪಾದಗಳು, ಅಡವಿಯ ಕಾಡು ಹುಲ್ಲು ಮೆಳೆಯಲ್ಲಿ ಅಲೆದಾಡಬೇಕಾ ಗಿದೆ. ಇದೆಲ್ಲವೂ ಆ ವೈರಿಗಳ ಕುಟಿಲತನದ ಕೈವಾಡವಲ್ಲವೇ ?

ಆದುದರಿಂದ, ಮಹಾರಾಜ, ಇನ್ನಾದರೂ ಶಾಂತಿಯನ್ನು ಬಿಡಿರಿ; ಶತ್ರುಗಳ ನಾಶಕ್ಕಾಗಿ ಕಂಕಣವನ್ನು ಕಟ್ಟಿಕೊಳ್ಳಿರಿ. ಶಾಂತಿಯಿಂದ ಶತ್ರುಗಳನ್ನು ಗೆಲ್ಲಬೇಕೆನುವುದು ಋಷಿ ಮುನಿಗಳಿಗೆ ಸಲ್ಲುತ್ತಿದೆ; ಕೆಚ್ಚಾಳು ಕ್ಷತ್ರಿಯರಿಗಲ್ಲ. ಇದು ನಿಮಗೆ ಸೇರದಿದ್ದರೆ, ಕೈಯಲ್ಲಿಯ ಬಿಲ್ಲು-ಬಾಣಗಳನ್ನು ಬಿಟ್ಟುಕೊಡಿರಿ; ಜಡೆಯನ್ನು ಬೆಳೆಸಿ ಅಡವಿಯಲ್ಲಿ ಯಜ್ಞದ ಬೆಂಕಿಯ ಮುಂದೆ ಕುಳಿತುಕೊಳ್ಳಿರಿ. ನೀಚ ಕೌರವ ನಮ್ಮ ವನವಾಸದಿಂದ ಸಮಾಧಾನ ಹೊಂದಿಲ್ಲ. ಈಗಲೂ ನಮ್ಮ ನಾಶದ ಹಾದಿಯನ್ನು ಹುಡುಕುತ್ತಿದ್ದಾನೆ. ಅಂತಹ ನೀಚನಿಗೆ ಮಾತುಕೊಟ್ಟ ಮಾತ್ರದಿಂದ ನಾವು ಹದಿಮೂರು ವರುಷ ವನವಾಸ–ಅಜ್ಞಾತವಾಸ ಗಳನ್ನು ನಡೆಸಬೇಕಾಗಿಲ್ಲ. ವಿಜಯದ ಆಸೆಯಿದ್ದರೆ, ಈಗಲೇ ಯಾವು ದೊಂದು ಕಾರಣವನ್ನು ಹುಡುಕಿರಿ; ಮಾತನ್ನು ಮುರಿದು ಬಿಡಿರಿ. ಆಮೇಲೆ ನಿಮ್ಮ ರಾಜ್ಯ ಲಕ್ಷ್ಮಿ ನಗುನಗುತ್ತ ತಾನಾಗಿಯೇ ನಿಮ್ಮ ಕಡೆಗೆ ಬರುತ್ತಾಳೆ.

## ೩. ಧರ್ಮರಾಜನ ಶಾಂತಿ ಸಂದೇಶ

ದ್ರೌಪದಿಯ ಕೆಣಕು ನುಡಿಗಳಿಂದ ಭೀಮಸೇನನಿಗೆ ಹುರುಪು ಬಂದಿತು. ಆ ಮಾತುಗಳ ಜಾಡಿನಲ್ಲಿಯೇ ತಾನೂ ತನ್ನ ವಿಚಾರ ಗಳನ್ನು ಮಂಡಿಸಿದ:

ದ್ರೌಪದಿಯ ನುಡಿಗಳನ್ನು ಬೃಹಸ್ಪತಿಯೂ ಮೆಚ್ಚಬಹುದಾಗಿದೆ. ಆಕೆಯ ನುಡಿಮುದ್ದು ಅಂಜುಗುಳಿಗೆ ಕಹಿ ಎನಿಸಬಹುದು; ಅದನ್ನೇ ಅನುಸರಿಸಿದರೆ ಪರಿಣಾಮದಲ್ಲಿ ಹಿತವಾಗದೆ ಇರಲಾರದು. ಗುಣಿ ಗಳಾದವರು– ಯಾರು ಮಾತನಾಡುತ್ತಾರೆ, ಎಂದು ನೋಡುವುದಿಲ್ಲ; ಏನನ್ನು ಹೇಳುತ್ತಾರೆ ಎಂಬುದನ್ನು ಲಕ್ಷಿಸುತ್ತಾರೆ. ರಾಜನೀತಿಯಲ್ಲಿ ಪ್ರವೀಣರಾದ ನಿಮ್ಮ ಬುದ್ಧಿ ಈಗಿನ ಆಪತ್ತಿಗಳ ಕೆಸರಿನಲ್ಲಿ ಸಿಕ್ಕ ಹೆಣ್ಣಾನೆಯಂತೆ ಒದೆದಾಡುತ್ತಿದೆ. ಇದರ ಕಾರಣವೇ ನನಗೆ ತಿಳಿ

ಯುದು. ನಿಮ್ಮ ಪೌರುಷದ ಬಗೆಗೆ ದೇವತೆಗಳಲ್ಲಿ ಕೂಡ ಮಾನ್ಯತೆ ಇತ್ತು. ಅದೆಲ್ಲವೂ ಈಗ ನಷ್ಟವೇ ಆಯಿತೇನೋ!

ಶತ್ರುಗಳು ತಮ್ಮ ಐಶ್ವರ್ಯ ಮದದಿಂದ ತಾವೇ ನಾಶವಾಗುವಂತಿದ್ದರೆ, ಅದನ್ನು ಬುದ್ಧಿವಂತರಾದವರು ಕಡೆಗಣಿಸಬಹುದು. ಆದರೆ, ಹಗೆಗಳ ಏಳ್ಗೆಯಿಂದ ತಾವು ಕಷ್ಟಕ್ಕೆ ಸಿಲುಕುವಂತೆ ಇದ್ದರೆ ಅದನ್ನು ತಾಳಿಕೊಳ್ಳಲಾಗದು. ಶತ್ರುವಿನ ಬೆಳವಣಿಗೆಯನ್ನು ಬಹುಕಾಲ ನಡೆಯುಗೊಡಬಾರದು. ಹಾಗೆ ನಡೆಯುಗೊಡುವ ಅವನಿಗೆ ಜನತೆಯಲ್ಲಿ ಅಪಯಶ – ಅಪಹಾಸ್ಯಗಳು ತಪ್ಪಿದುವಲ್ಲ. ಈ ಭಯದಿಂದಲೇ ಲಕ್ಷ್ಮಿ ಕೂಡ ಅವನನ್ನು ಬಿಟ್ಟು ಹೋಗುತ್ತಾಳೆ. ಹೀಗಾಗಬಾರದೆಂದಿದ್ದರೆ, ರಾಜನಾದವನು ಎಂಥ ಸಂಕಟದಲ್ಲಿದ್ದರೂ ಅನ್ಯಾಯವನ್ನು ಇದಿರಿಸಬೇಕು; ತನ್ನ ಕಲ್ಯಾಣವನ್ನು ಮಾಡಿಕೊಳ್ಳಬೇಕು, ಒಂದು ವೇಳೆ ಈ ಪ್ರಯತ್ನದಲ್ಲಿ ಸೋಲು ಬರಬಹುದು, ಅವನತಿ ಒದಗಬಹುದು; ಆದರೂ ಧೈರ್ಯದಿಂದ ಮುನ್ನುಗ್ಗಬೇಕು.

ಆದುದರಿಂದ, ಅಣ್ಣಾ, ನಮ್ಮ ಉನ್ನತಿಯ ಮಾರ್ಗದಲ್ಲಿ ಅಡ್ಡಬಂಡೆಗಲ್ಲಾಗಿರುವ ಈ ಕ್ರಿಯಾಶೂನ್ಯತೆ ಸಾಕು. ಸಂಪತ್ತಿನ ಸಾಧನೆ ಪರಾಕ್ರಮದಲ್ಲಿದೆ, ಉದಾಸೀನತೆಯಲ್ಲಿ ಅಲ್ಲ. ಹೇಗಾದರೂ ಒಮ್ಮೆ ಮಾತು ಕೊಟ್ಟಂತೆ ವನವಾಸವನ್ನು ಮುಗಿಸೋಣ; ಆ ಮೇಲೆ ನಮ್ಮ ರಾಜ್ಯ ನಮಗೆ ಬಂದೇ ಬರುತ್ತಿದೆ— ಹೀಗೆ ನೀವು ವಿಚಾರ ಮಾಡಬಹುದು. ಆದರೆ ದುರ್ಯೋಧನ ಕುಟಿಲ, ರಾಜ್ಯಲೋಭಿ– ಅಂತಹನು ನಿಮ್ಮ ರಾಜ್ಯವನ್ನು ಕೊಟ್ಟೇ ಕೊಡುತ್ತಾನೆ, ಎಂದು ಹೇಗೆ ನಂಬುತ್ತೀರಿ? ಒಂದು ವೇಳೆ ಅವನು ಕೊಟ್ಟರೂ ಅದು ಬಿಕ್ಕೆಯ ರಾಜ್ಯವಾದೀತು; ಪೌರುಷರಿಂದ ಪಡೆದುದಾಗಲಾರದು. ಸಿಂಹ ತನ್ನ ಶಕ್ತಿಯಿಂದ ಆನೆಯನ್ನು ಕೊಲ್ಲುತ್ತಿದೆ; ಅದರ ಮಾಂಸವನ್ನು ತಿನ್ನುತ್ತಿದೆ. ಬೇರೆ ಪ್ರಾಣಿಗಳು ಕೊಂದ ಮಾಂಸವನ್ನು ತಿನ್ನುವುದಿಲ್ಲ. ಪಾಂಡವರ ಪರಾಕ್ರಮಕ್ಕೆ ಹೆರವರ ದಯೆ ಬೇಕಾಗಿಲ್ಲ. ಒಮ್ಮೆ ಯುದ್ಧವನ್ನು ಘೋಷಿಸಿ ಬಿಡಿರಿ. ಆ ಮೇಲೆ ನಾಲ್ಕು ದಿಗ್ಗಜಗಳಂತೆ

ರುವ ನಿಮ್ಮ ತಮ್ಮಂದಿರ ಪರಾಕ್ರಮಕ್ಕೆ ಇದಿರು ನಿಲ್ಲುವ ಗಂಡು ಎಲ್ಲಿ ರವನೋ ನೋಡಿಯೇ ಬಿಡೋಣ– ಹುಂ. ತಡಮಾಡಬೇಡಿರಿ. ನಿಮ್ಮ ಕ್ರೋಧವನ್ನು ಕೆರಳಿಸಿರಿ; ರಣಕಹಳೆಯನ್ನು ಊದಿಸಿರಿ.... !

ಭೀಮಸೇನ ಮದೋನ್ಮತ್ತ ಗಜದಂತೆ ಘೀಳಿಡಹತ್ತಿದ. ಅವನ ಕೆಂಗಣ್ಣು ಕಿಡಿಗಳನ್ನು ಕಾರುತ್ತಿದ್ದುವು. ಅವನ ಕೋಪವನ್ನು ಶಾಂತ ಮಾಡುವುದು ಧರ್ಮರಾಜನ ಆಗಿನ ಕರ್ತವ್ಯವಾಗಿತ್ತು. ಆತ ಮೆಲ್ಲನೆ ಶಾಂತಿ ತತ್ತ್ವದ ಮಾತುಗಳನ್ನು ಆರಂಭಿಸಿದ:

ನೀವು ಏನೆಲ್ಲವನ್ನೂ ನಿಚ್ಚಳವಾಗಿ ತೂಕ ತಪ್ಪದಂತೆ ಹೇಳಿದ್ದೀರಿ. ನಿಮ್ಮ ನಿಷ್ಕಲಂಕ ಎದೆಯ ಕನ್ನಡಿಯಲ್ಲಿ ನಿಮ್ಮ ಒಳ್ಳೆಯ ತಿಳಿವಳಿಕೆ ಸರಳವಾಗಿ ಮೂಡಿದೆ. ಕ್ಷತ್ರಿಯ ವೀರರಿಗೆ ತಕ್ಕ ಮಾತುಗಳಿವು. ಒಂದು ದೃಷ್ಟಿಯಿಂದ ಈ ನುಡಿಗಳನ್ನು ಒಪ್ಪಲೇಬೇಕು. ಆದರೆ ಮನುಷ್ಯ ಸಂಕಟದಲ್ಲಿ ಸಿಕ್ಕಿರುವಾಗ, ಯಾವುದನ್ನು ಮಾಡಬೇಕು ಯಾವುದನ್ನು ಬಿಡಬೇಕು, ಎಂದು ಒಮ್ಮೆಲೆ ಗೊತ್ತು ಮಾಡುವುದು ಕಠಿನ. ಆದರಿಂದಲೇ, ನಿಮ್ಮ ಮಾತಿನಿಂದ ನನಗಿನ್ನೂ ಸಮಾಧಾನ ವಾಗಿಲ್ಲ. ಮಾಡತಕ್ಕುದನ್ನು ಪುನಃ ಪುನಃ ವಿಚಾರಮಾಡಿ ನಿರ್ಣಯಿ ಸಬೇಕಾಗಿದೆ. ಯಾವ ಕಾರ್ಯವನ್ನೂ ದುಡುಕಿ ಮಾಡುವುದು ಒಳಿ ತಲ್ಲ. ಒಳಿತು ಕೆಡಕುಗಳ ವಿವೇಕವಿಲ್ಲದ ಆಚರಣೆ ಅನೇಕ ಆಪತ್ತು ಗಳಿಗೆ ಆಸ್ಪದವಾಗುತ್ತಿದೆ. ಯೋಗ್ಯಾಯೋಗ್ಯಗಳನ್ನು ವಿಮರ್ಶಿಸಿ ಕೆಲಸ ಮಾಡುವವನಿಗೆ ಜಯಮಾಲೆ ತಾನಾಗಿಯೇ ದೊರೆಯುತ್ತಿದೆ. ಏಕೆಂದರೆ, ಸಂಪತ್ತುಗಳು ಯಾವಾಗಲೂ ಗುಣಿಗಳನ್ನೇ ಮೋಹಿಸು ತ್ತಿವೆ. ಒಕ್ಕಲಿಗ ತತಿಯನ್ನು ತಿಳಿದು ಬೀಜ ಬಿತ್ತುತ್ತಾನೆ; ಅವು ಗಳನ್ನು ಸರಿಯಾಗಿ ನೋಡಿಕೊಳ್ಳುತ್ತಾನೆ. ಈ ಕಾರಣದಿಂದ, ಅವನು ಶರತ್ಕಾಲದಲ್ಲಿ ಒಳಿತಾದ ಬೆಳೆಯನ್ನು ಪಡೆಯುತ್ತಾನೆ. ಹಾಗೆಯೇ, ವಿವೇಕಿಯಾದವನು ಇತಿಕರ್ತವ್ಯದ ಬೀಜಗಳನ್ನು ವಿವೇಕ ಜಲದಿಂದ ಬೆಳೆಸಬೇಕು. ಕೊನೆಯಲ್ಲಿ ಬೇಡಿದ ಫಲ ಸಿಕ್ಕೇ ಸಿಕ್ಕುತ್ತಿದೆ. ಉನ್ನ ತಿಯನ್ನು ಬಯಸುವ ಅರಸು ತನ್ನ ಕೋಪದ ಕತ್ತಲೆಯನ್ನು ವಿವೇ

ಕದ ಬೆಳಕಿನಿಂದಲೇ ಕಳೆಯಬೇಕು. ಕತ್ತಲೆ ಕಳೆದ ಮೇಲೆಯೇ ಸೂರ್ಯದೇವನ ಬೆಳಕು ಬೆಳಗುತ್ತಿದೆಯಲ್ಲವೇ ? ಸೂರ್ಯದೇವ ಮುಂಜಾವದಲ್ಲಿ ಮಿದುವಾಗಿಯೂ ಮಧ್ಯಾಹ್ನದಲ್ಲಿ ಬಿಸುಪಾಗಿಯೂ ತನ್ನ ಬೆಳಕನ್ನು ಪಸರಿಸುತ್ತಾನೆ. ಹಾಗೆಯೇ, ರಾಜನಾದವನು ಸಮಯಕ್ಕೆ ತಕ್ಕಂತೆ ಮಿದುವೂ ಆಗಬೇಕು, ಪರಾಕ್ರಮದ ಬಿಸಿಯನ್ನೂ ತೋರಬೇಕು. ಎಂದರೆಯೇ, ಸಂಸಾರದಲ್ಲಿ ಅವನ ತೇಜಸ್ಸು ಎಲ್ಲರಿಗೂ ಬೇಕಾಗುತ್ತಿದೆ. ತಮ್ಮಾ ತಿಳಿದು ನೋಡು: ರಾಜ್ಯಲಕ್ಷ್ಮಿ ಶೀತಕಾಲದ ಮೋಡದಂತೆ ಬಹು ಚಂಚಲ. ಸಿಟ್ಟು ಸದಾ ಸಫಲತೆಯ ವೈರಿ; ತಾಳ್ಮೆ ಎಂದೆಂದಿಗೂ ಹಿತವಂತನಾದ ಗೆಳೆಯ. ನಿಮಗೆ ಗೆಲುವು ಬೇಕಾಗಿದ್ದರೆ— ಪ್ರಯತ್ನಗಳು ಫಲವನ್ನು ಕೊಡಬೇಕು, ದೇಹಕ್ಕೆ ದಂಡನೆ ಕಡಮೆಯಾಗಿರಬೇಕು, ಇಂತಹ ಸನ್ಮಾರ್ಗವನ್ನು ಹಿಡಿಯಿರಿ. ಇದಕ್ಕೆ ವಿರುದ್ಧವಾಗಿ ತಾಳ್ಮೆಗೆಟ್ಟ ಹಾದಿಯನ್ನು ಹಿಡಿಯಬೇಡಿರಿ.

ನಾನೀಗ ಪ್ರತಿಜ್ಞೆಯನ್ನು ಪೂರ್ತಿ ಮಾಡಬೇಕೆನ್ನುತ್ತೇನೆ. ಆದರೆ ಈ ಅವಧಿಯಲ್ಲಿ ದುರ್ಯೋಧನ ಎಲ್ಲ ರಾಜರ ಪ್ರೇಮವನ್ನು ಗಳಿಸಬಹುದು, ತನ್ನ ರಾಜ್ಯಾಧಿಕಾರವನ್ನು ನೆಲೆಗೊಳಿಸಬಹುದು– ಎಂಬ ನಿಮ್ಮ ಸಂಶಯಕ್ಕೂ ಆಧಾರವಿಲ್ಲ. ಈಗ ವೃಷ್ಣಿ ಅರಸರು ಅವರ ಮಿತ್ರರು, ದುರ್ಯೋಧನನ ಅಂಕಿತದಲ್ಲಿ ಇದ್ದಾರೆ; ನಿಜ. ಆದರೆ ಅವರು ನಮ್ಮ ಸ್ನೇಹವನ್ನು ಎಂದೂ ಮರೆತಿಲ್ಲ, ಮರೆಯುವುದಿಲ್ಲ. ನಮ್ಮ ವನವಾಸ ಮುಗಿಯುತ್ತಲೇ ಅವರೆಲ್ಲ ನಮ್ಮವರೇ. ನಾವು ವಚನ ಭಂಗ ಮಾಡಿದರೆ ಮಾತ್ರ ಅವರು ನಮ್ಮ ಸತ್ಯವಂತಿಕೆಯಲ್ಲಿ ಅವಿಶ್ವಾಸವನ್ನು ತಳೆಯುತ್ತಾರೆ; ನಮ್ಮನ್ನು ತೊಲಗಿಯೂ ಹೋಗುತ್ತಾರೆ. ಇನ್ನುಳಿದ ಅರಸುಗಳ ವಿಚಾರವೂ ಹೀಗೆಯೇ ಇದೆ. ದುರ್ಯೋಧನನ ದುರಭಿಮಾನದ ಮೂಲಕ, ಯಾರೂ ತಾವಾಗಿಯೇ ಅವನನ್ನು ಓಲಯಿಸಲಾರರು. ತನಗಾದ ಅಪಮಾನವನ್ನು ಸಾಮಾನ್ಯ ಮನುಷ್ಯ ಕೂಡ ಸಹಿಸಲಾರ. ಎಂದ ಮೇಲೆ, ಆ ವೀರ ಕ್ಷತ್ರಿಯರು ಅವನ ಸೊಕ್ಕನ್ನು ಸಹನ ಮಾಡಬಹುದೇ ? ಇಷ್ಟೇ ಅಲ್ಲ; ದುರ್ಯೋಧನ

ಅಧಿಕಾರ–ವೈಭವಗಳ ಮದದಿಂದ ಹಾದಿ ತಪ್ಪಿ ಹೆಜ್ಜೆ ಹಾಕುತ್ತಾನೆ. ಅಂತಹನನ್ನು ಪ್ರಜೆಗಳು ಕೂಡ ಪ್ರೀತಿಸಲಾರರು. ಪ್ರಜೆಗಳ ಬೆಂಬಲ ವಿಲ್ಲದಿದ್ದರೆ, ಅರಸನ ಅಧಿಕಾರ ವೃಕ್ಷದ ಬೇರುಗಳೇ ಸಡಿಲಿದಂತೆ. ಪ್ರತೀಕಾರದ ಸ್ವಲ್ಪ ಗಾಳಿ ಬೀಸಿದರೂ ಸಾಕು; ಆ ಅಧಿಕಾರದ ಮರ ಬೇರುಸಹಿತ ಬುಡಮೇಲಾಗುತ್ತಿದೆ. ಅಂತಹ ಸಮಯ ಕೌರವನಿಗೆ ಬೇಗನೆ ಬಂದೇ ಬರುತ್ತಿದೆ. ನಾವು ಬುದ್ಧಿವಂತರಾಗಿದ್ದರೆ, ಅವನು ತನ್ನಿಂದ ತಾನೇ ವಿನಾಶಕ್ಕೆ ಪಕ್ಕಾಗುವ ವರೆಗೆ ತಡೆಯಬೇಕು. ಈಗ ಅವನಿಗೆ ಒಳಗೂ ಹೊರಗೂ ಶತ್ರುಗಳಿದ್ದೇ ಇದ್ದಾರೆ. ಅವರ ಸಂಖ್ಯೆ ಇನ್ನಷ್ಟು ಬೆಳೆಯಲಿ. ಆಗ ನಮ್ಮ ಒಂದೇ ಒಂದು ಪೆಟ್ಟು ಸಾಕು; ಗದ್ದಿಗೆಯಿಂದ ಕೆಳಗೆ ಉರಳಿ ಬೀಳುತ್ತಾನೆ.......

---

## ೪. ವ್ಯಾಸರ ಭವಿಷ್ಯವಾಣಿ

ಧರ್ಮರಾಜ ಕುಪಿತನಾದ ಭೀಮಸೇನನನ್ನು ತನ್ನ ಹಿತವಚನ ಗಳಿಂದ ಸಂತಯಿಸುತ್ತಿದ್ದ. ಅವನ ಮನೋರಥವೇ ಮೂರ್ತಿಯಾಗಿ ಬರುತ್ತಿದೆಯೋ ಎನುವಂತೆ, ವ್ಯಾಸಮಹರ್ಷಿಗಳು ಅಲ್ಲಿಗೆ ಆಗಮಿಸಿ ದರು. ಆ ಪುಣ್ಯ ಮೂರ್ತಿಯ ಪಾದ ಧೂಳಿಯಿಂದ ವನದಲ್ಲೆಲ್ಲ ಶಾಂತಿ ಪಸರಿಸಿತು. ಪಾಂಡವರೆಲ್ಲರ ಹೃದಯದಲ್ಲಿ ಸಮಾಧಾನ ನೆಲೆ ಯೂರಿತು. ಧರ್ಮರಾಜ ಭಕ್ತಿಯಿಂದ ಎದ್ದು ನಿಂತ; ಅರ್ಘ್ಯಪಾದ್ಯ ಗಳಿಂದ ಅವರ ಪೂಜೆಯನ್ನು ಮಾಡಿದ; ಪ್ರತಿಯಾಗಿ ಮುನಿಗಳು ಶುಭಾಶೀರ್ವಾದ ಮಾಡಿದರು. ಅವರ ಅಪ್ಪಣೆಯಂತೆ ಅರಸು ಇದಿ ರಿಗೆ ಕುಳಿತುಕೊಂಡ.

ವ್ಯಾಸರು ಹರ್ಷಚಿತ್ತರಾಗಿ ಆಸನದ ಮೇಲೆ ಕುಳಿತಿದ್ದರು. ಧರ್ಮ ರಾಜ ಅವರ ಸುಖಾಗಮನವನ್ನೂ ಅದರ ಕಾರಣಗಳನ್ನು ಕೇಳಬೇಕಾ ಗಿತ್ತು. ಮೆಲ್ಲನೆ ವಿನಯಪೂರ್ವಕವಾಗಿ ಮಾತನ್ನೆತ್ತಿದ;

ಪೂಜ್ಯರೇ, ಯಾರು ಅನೇಕ ಪುಣ್ಯಕಾರ್ಯಗಳನ್ನು ಮಾಡಿದ್ದಾ

ರೆಯೋ ಅಂತಹರಿಗೆ ಮಾತ್ರವೇ ತಮ್ಮ ಪವಿತ್ರ ದರ್ಶನವಾಗುತ್ತಿದೆ. ಆ ಕೂಡಲೆ ಅವರಿಗೆ ಜ್ಞಾನ ಪ್ರಾಪ್ತಿಯಾಗುತ್ತಿದೆ; ಅಜ್ಞಾನ ಅಡಗುತ್ತಿದೆ. ಇಂದು ಅನಿರೀಕ್ಷಿತವಾಗಿ ಪೂಜ್ಯರ ದರ್ಶನವಾಯಿತು. ಇದರಿಂದ, ಈ ವರೆಗೆ ನಾನು ಮಾಡಿದ ಯಜ್ಞಗಳು ಸಫಲವಾದುವು. ಪುರೋಹಿತರು ಕೊಟ್ಟ ಶುಭಾಶೀರ್ವಾದಗಳು ಸಾರ್ಥಕವಾದುವು. ತಾವು ಪ್ರತ್ಯಕ್ಷ ಬ್ರಹ್ಮಸ್ವರೂಪರು. ತಮ್ಮ ದರ್ಶನದಿಂದ— ಲಕ್ಷ್ಮಿ ಪ್ರಾಪ್ತವಾಗುತ್ತಾಳೆ; ಪಾಪ ನಾಶವಾಗುತ್ತಿದೆ; ಪ್ರೇಮ ಬೆಳೆಯುತ್ತಿದೆ; ಕೀರ್ತಿ ವಿಸ್ತಾರವಾಗುತ್ತಿದೆ; ಬಹಳವೇನು ? ಇಷ್ಟಾರ್ಥಗಳೆಲ್ಲವೂ ತಡವಿಲ್ಲದೆ ಪೂರಯಿಸುತ್ತಿವೆ ! ಇದಕ್ಕೆ ಪ್ರತಿಯಾಗಿ ತಾವು ಏನನ್ನೂ ಬೇಡಲಾರಿರಿ. ಲೋಕ ಕಲ್ಯಾಣಕ್ಕಾಗಿಯೇ ತಮ್ಮ ಸಂಚಾರ. ಆದುದರಿಂದ ಪೂಜ್ಯರ ಸುಖಾಗಮನದ ಕಲ್ಯಾಣ ವಾರ್ತೆಯನ್ನು ಕೇಳಬೇಕೆಂದು ಮನಸ್ಸು ತವಕಿಸುತ್ತಿದೆ. ಅನುಗ್ರಹಿಸಬೇಕು.

ಯುಧಿಷ್ಠಿರ ಮಹಾರಾಜನ ಮಾತಿನಲ್ಲಿ ಮುಂದಿನ ಗೆಲುವಿನ ಅಭಿಲಾಷೆ ತೋರುತ್ತಿತ್ತು. ಅದನ್ನು ಬಹಿರಂಗಪಡಿಸಲಿಲ್ಲ. ವಿನಯವಾಣಿಯಿಂದ ಪೂಜ್ಯರ ಬಗೆಗೆ ಭಕ್ತಿ – ಭಾವವನ್ನೇ ವ್ಯಕ್ತಪಡಿಸಿದ. ಸಂತುಷ್ಟರಾದ ವ್ಯಾಸ ಮಹರ್ಷಿಗಳು ಈ ರೀತಿ ಅಪ್ಪಣೆ ಕೊಡಿಸಿದರು:

ರಾಜನ್, ನಾವು ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ದೃಷ್ಟಿಯುಳ್ಳವರು. ನಮ್ಮಂತಹ ತಪೋಧನರು ಬಂಧು – ಬಾಂಧವರಲ್ಲಿ ಸಮದೃಷ್ಟಿಯನ್ನು ಇಡಬೇಕು; ನಿಜ. ಆದರೆ, ನಿಮ್ಮ ಸದ್ಗುಣಗಳಿಂದ ನಮ್ಮ ಮನಸ್ಸು ನಿಮ್ಮ ಕಡೆಗೇ ಒಲಿಯುತ್ತಿದೆ. ನಾವು ಮೋಕ್ಷಾಭಿಲಾಷಿಗಳು; ರಾಗ ದ್ವೇಷಗಳನ್ನು ಬಿಟ್ಟಿದ್ದೇವೆ, ನಿಜ. ಆದರೂ ನಮ್ಮಲ್ಲಿ ಸಜ್ಜನರ ಬಗೆಗೆ ಪಕ್ಷ–ಪಾತ ಬುದ್ಧಿ ಇರುವುದು ಸಹಜವಾಗಿದೆ. ನೀವು ಕೌರವರ ಬಂಧುಗಳೇ ಮಾತ್ರ, ಸದ್ಗುಣಗಳ ದೃಷ್ಟಿಯಿಂದ ಅವರಿಗಿಂತ ಮಿಗಿಲಾಗಿದ್ದೀರಿ. ದುರ್ಯೋಧನ ಇದನ್ನು ತಿಳಿಯಲಿಲ್ಲ. ರಾಜ್ಯದ ಆಸೆಗೆ ಬಿದ್ದು ನಿಮ್ಮನ್ನು ದೂರಮಾಡಿದ್ದಾನೆ. ಅವನಿಗೆ ಕರ್ಣ ಮೊದಲಾದ ಅವಿವೇಕರು ಜೀವದ ಗೆಳೆಯರಾಗಿದ್ದಾರೆ.

ಅವಿವೇಕರನ್ನು ಆಶ್ರಯಿಸುವವನಿಗೆ ಅವನತಿ ತಪ್ಪಿದ್ದಲ್ಲ; ಇಷ್ಟೇ ಅಲ್ಲ, ಅಂತಹನು ಅನೇಕ ಆಪತ್ತುಗಳಿಗೂ ಗುರಿಯಾಗುತ್ತಾನೆ. ನೀವು ಕೌರವರ ಸಭೆಯಲ್ಲಿ ಹಲವಾರು ಅಪಮಾನಗಳನ್ನು ಹೊಂದಿದಿರಿ; ಕಾಡಿನ ಕಷ್ಟಗಳಿಗೆ ಪಕ್ಕಾದಿರಿ. ಆದರೂ ನಿಮ್ಮ ಧರ್ಮ ಬುದ್ಧಿಯನ್ನು ಬಿಡಲಿಲ್ಲ. ಇದರಿಂದ ದುರ್ಯೋಧನನ ಕೀಳುತನ ಹೊರಬಿದ್ದಿತು; ನಿಮ್ಮ ಮೇಲ್ಮೆ ಜಗತ್ತಿಗೇ ಗೊತ್ತಾಯಿತು.

ಧರ್ಮರಾಜಾ, ನೀವು ಪರಾಕ್ರಮಿಗಳು. ಶೌರ್ಯ ಬಲದಿಂದಲೇ ನಿಮ್ಮ ರಾಜ್ಯವನ್ನು ಗೆಲ್ಲಬೇಕು; ಗೆಲ್ಲುತ್ತೀರಿ. ಸದ್ಯಃ ಕೌರವರಲ್ಲಿ ಸೈನ್ಯಬಲ, ಶಸ್ತ್ರಬಲ ಹೆಚ್ಚಾಗಿದೆ. ಅದಕ್ಕಿಂತ ಹೆಚ್ಚಾಗಿ ನೀವು ಶಸ್ತ್ರಗಳನ್ನು ಸಂಗ್ರಹಿಸಬೇಕು, ಆ ಪ್ರಯತ್ನವನ್ನು ನಡೆಸಬೇಕು.

ಕೌರವರ ಕಡೆಗೆ ಭೀಷ್ಮಾಚಾರ್ಯರಿದ್ದಾರೆ. ಅವರು ಸಾಮಾನ್ಯರಲ್ಲ. ಇಪ್ಪತ್ತೊಂದು ಸಲ ಕ್ಷತ್ರಿಯರನ್ನು ಗೆದ್ದು ಗೋಳಾಡಿಸಿದ ಪರಶುರಾಮ. ಅಂತಹನನ್ನು ಕೂಡ ಹಣ್ಣು ಮಾಡಿಬಿಟ್ಟ ಭೀಷ್ಮಾಚಾರ್ಯ. ಇಂತಹ ವೀರನ ಧನುಷ್ಟಂಕಾರ ಯಾರ ಎದೆಯನ್ನು ಒಡೆಸಲಿಕ್ಕಿಲ್ಲ. ಹಾಗೆಯೇ ದ್ರೋಣಾಚಾರ್ಯ. ಅವನು ಅಗ್ನಿ ಬಾಣಗಳನ್ನು ಬಿಡಹತ್ತಿದರೆ ಅದಕ್ಕೆ ಇದಿರಾಗುವ ಕೆಚ್ಚು ಯಾರಲ್ಲಿದೆ? ಕರ್ಣನಾದರೂ ಸಾಮಾನ್ಯನಲ್ಲ. ವೀರಾಧಿವೀರನಾದ ಪರಶುರಾಮನಲ್ಲಿ ಶಸ್ತ್ರವಿದ್ಯಾಭ್ಯಾಸ ಮಾಡಿದ್ದಾನೆ. ಆತನ ಕಾರ್ಯಕ್ಕೆ ಮೃತ್ಯುದೇವತೆಯೂ ತಲೆಬಾಗಬೇಕು.

ಅರಸೇ ಇದೆಲ್ಲವನ್ನು ತಿಳಿದು ನೋಡು. ಅವರೆಲ್ಲರಿಗೂ ಇದಿರಾಗುವ ವೀರನೆಂದರೆ ಅರ್ಜುನ. ಆದರೆ ಅವನಿಗೆ ಶ್ರೇಷ್ಠವಾದ ಶಸ್ತ್ರ–ಅಸ್ತ್ರಗಳ ಆವಶ್ಯಕತೆಯಿದೆ. ಆತನು ತನ್ನ ತಪೋಬಲದಿಂದ ದೇವತೆಗಳನ್ನು ಒಲಿಸಿಕೊಳ್ಳಬೇಕು; ಅವರಿಂದ ಮಹಾ ಮಹಾ ಅಸ್ತ್ರಗಳನ್ನು ಪಡೆಯಬೇಕು. ಆಗ ಮಾತ್ರ ನಿಮಗೆ ಜಯಮಾಲೆ ದೊರಕಿಯೇ ತೀರುವುದು. ಇದನ್ನು ಹೇಳುವುದಕ್ಕೇ ನಾನಿಲ್ಲಿಗೆ ಬಂದಿರುವೆ.

ಮುನಿಗಳ ಮಾತು ಅರ್ಜುನನ ಎದೆಯಲ್ಲಿ ಆಸೆಯ ಬೀಜಗಳನ್ನು

ನಟ್ಟುವು. ಆತ ಎದ್ದು ಪೂಜ್ಯರನ್ನು ನಮಸ್ಕರಿಸಿದ; ಹಾಗೆಯೇ ಅವರನ್ನು ನೋಡುತ್ತ ನಿಂತ. ವ್ಯಾಸರು ಕೃಪಾದೃಷ್ಟಿಯಿಂದ ಅವನನ್ನು ನಿಟ್ಟಿಸಿ ನೋಡಹತ್ತಿದರು. ಆ ದೃಷ್ಟಿಯ ಮೂಲಕ ಯೋಗ ಸಾಮರ್ಥ್ಯ ಪಾರ್ಥನ ಶರೀರವನ್ನು ವ್ಯಾಪಿಸಿತು. ಅವನ ಮುಖ ತಪಸ್ವಿಯ ತೇಜದಿಂದ ಒಪ್ಪತೊಡಗಿತು; ಹೃದಯ ಉತ್ಸಾಹದಿಂದ ಉಕ್ಕಹತ್ತಿತು.

ವ್ಯಾಸರಿಗೆ ಆನಂದವಾಯಿತು. ಅರ್ಜುನನಿಗೆ ಮುಂದಿನ ಮಾರ್ಗವನ್ನು ಹೇಳಹತ್ತಿದರು: ವತ್ಸಾ, ನಿನ್ನಲ್ಲೀಗ ತಪಸ್ಸಾಮರ್ಥ್ಯ ತುಂಬಿದೆ. ಇದೇ ಉತ್ಸಾಹದಲ್ಲಿಯೇ ಹಿಮಾಲಯಕ್ಕೆ ಹೋಗು. ತಪಸ್ವಿಗಳಿಗೆ ತಕ್ಕ ಸ್ನಾನ ಜಪ ತಪಗಳನ್ನು ಆಚರಿಸು. ದೇವತೆಗಳಿಂದ ಶ್ರೇಷ್ಠ ಶಸ್ತ್ರಾಸ್ತ್ರಗಳನ್ನು ಪಡೆದುಕೊಂಡೇ ತಿರುಗಿ ಬರಬೇಕು ನೀನು. ಗಿರಿನಿವಾಸಿಯಾದ ಗುಹ್ಯಕ ನಿನ್ನ ಸಂಗಡ ಬರುತ್ತಾನೆ. ತಪಸ್ಸಿಗೆ ಯೋಗ್ಯವಾದ ಗಿರಿಶಿಖರಗಳನ್ನು ತೋರಿಸುತ್ತಾನೆ. ಅಲ್ಲಿ ಕುಳಿತು ಇಂದ್ರಾದಿ ದೇವತೆಗಳನ್ನು ಕುರಿತು ಜಪ ತಪಗಳನ್ನು ಆರಂಭಿಸು. ತಡಮಾಡಬೇಡ....

ಹೇಳ ಹೇಳುತ್ತಲೇ ವ್ಯಾಸಮುನಿಗಳು ಮಾಯವಾದರು. ಆ ಸ್ಥಳದಲ್ಲಿಯೇ ಗುಹ್ಯಕ ಕಾಣಿಸಿಕೊಂಡ. ಅರ್ಜುನ ಮಧುರ ಮಾತುಗಳಿಂದ ಅವನನ್ನು ಸ್ವಾಗತಿಸಿದ. ಕ್ಷಣಮಾತ್ರದಲ್ಲಿ ಅವರಿಬ್ಬರೂ ಜೀವದ ಜೊತೆಗಾರರಾದರು. ಮುನಿಗಳ ಆಜ್ಞೆಯಾಗಿತ್ತು. ವಿಲಂಬ ಮಾಡುವಂತಿರಲಿಲ್ಲ. ಅವರಿಬ್ಬರೂ ಹಿಮಾಲಯದ ಕಡೆಗೆ ಹೊರಟರು.

—

## ೫. ಪಾರ್ಥನ ಪ್ರಯಾಣ

ಅರ್ಜುನನ ಅಗಲಿಕೆಯಿಂದ ಅಣ್ಣ ತಮ್ಮಂದಿರಿಗೆ ಬಲು ದುಃಖವಾಯಿತು. ಅವರ ಮೋರೆ ಬಾಡಿದುವು. ಆದರೆ ಕ್ಷಣಕಾಲ ಮಾತ್ರ. ಏಕೆಂದರೆ, ಮಹತ್ತ್ವದ ಸಾಧನೆಗಾಗಿ ಆತ ಹೊರಟಿದ್ದಾನೆ, ಎಂಬು

ದನ್ನು ಅವರು ಅರಿತಿದ್ದರು. ಆ ಸಾಧನೆಯಲ್ಲಿ ಯಶಸ್ಸು ಪಡೆಯುವುದು ಅವರಿಗೆ ಅವಶ್ಯವಾಗಿತ್ತು. ಅರ್ಜುನನ ತಪಸ್ಸಿಗೆ ವ್ಯಾಸಮುನಿಗಳ ಸಂಪೂರ್ಣ ಬೆಂಬಲವಿತ್ತು. ಕೌರವನ ಮೇಲಿನ ಕ್ರೋಧ, ಅರ್ಜುನನ ಬಗೆಗೆ ಆತ್ಮವಿಶ್ವಾಸ— ಇವು ಕೂಡ ಪಾಂಡವರ ದುಃಖವನ್ನು ಕಡಮೆ ಮಾಡಲು ಕಾರಣವಾದುವು.

ದ್ರೌಪದಿ ಎಷ್ಟೆಂದರೂ ಹೆಂಗರುಳಿನ ಹೆಣ್ಣು. ಅವಳು ಎಷ್ಟೇ ಧೀರೆಯಾಗಿದ್ದರೂ ಪತಿದೇವನ ಅಗಲಿಕೆಯಿಂದ ಕಣ್ಣು ಹನಿಯೂಡಿದುವು. ಎದೆ ಡವ ಡವ ಬಡಿದುಕೊಂಡಿತು. ಪತಿಯ ಪ್ರಯಾಣ ಸುಖಕರವಾಗಲಿ, ಎಂದು ದೂರದಿಂದಲೇ ಹಾರಯಿಸಿದಳು. ಅತ್ತಲೇ ನೋಡುತ್ತ ನಿಂತಳು. ಅರ್ಜುನನೂ ಪ್ರಿಯೆಯ ಕಡೆಗೆ ಹೊರಳಿ ನೋಡಿದ. ಆ ಕರುಣ-ಮೋಹಕ ದೃಷ್ಟಿ ಅವನ ಉತ್ಸಾಹವನ್ನು ಇಮ್ಮಡಿಸಿತು. ಕೊನೆಯದಾಗಿ ಬೀಳ್ಕೊಳ್ಳಲು ದ್ರೌಪದಿಯ ಹತ್ತಿರಕ್ಕೆ ಬಂದ ಅರ್ಜುನ.

ದ್ರೌಪದಿಯ ದುಃಖ ಇನ್ನು ಕಡಮೆಯಾಗಿರಲಿಲ್ಲ. ಗದ್ಗದ ಕಂಠದಿಂದಲೇ ಮಾತನಾಡಿದಳು— ವೀರ ಪುತ್ರಾ, ಹಗೆಗಳ ಕಪಟದ ಕೆಸರಿನಲ್ಲಿ ಸಿಲುಕಿರುವ ರಾಜ್ಯ ಲಕ್ಷ್ಮಿಯನ್ನು ಬಿಡಿಸಲು ಹೊರಟಿರುವಿ. ಅದಕ್ಕಾಗಿ ನೀವು ಉಗ್ರ ತಪಸ್ಸನ್ನು ಮಾಡಬೇಕಾದೀತು. ಆ ಸಮಯದಲ್ಲಿ ನಮ್ಮ ನೆನಪಿನಿಂದ ಚಿತ್ತ ಚಂಚಲವಾಗಬಾರದು; ಉದಾಸೀನವಾಗಬಾರದು. ಇದೇ ಯಶಃ ಸಂಪಾದನೆಯ, ಉಚ್ಚಪದ ಪ್ರಾಪ್ತಿಯ ಬೀಜ ಮಂತ್ರ. ಇದನ್ನು ನೀವು ತಪ್ಪದೆ ಪಾಲಿಸಬೇಕು. ಹಾಗಾದರೆಯೇ ಇಚ್ಛಿತ ಫಲ ತಪ್ಪದೆ ಕೈಸೇರುವುದು.

ನಮ್ಮ ಮೇಲೆ ಕೌರವರು ಹಲವಾರು ಭಯಂಕರ ಅತ್ಯಾಚಾರ ಮಾಡಿದ್ದಾರೆ. ಅವರು ಕೇವಲ ಪಾಂಡವರನ್ನಷ್ಟೇ ಅಪಮಾನಕ್ಕೆ ಈಡುಮಾಡಿಲ್ಲ; ಸಂಸಾರವನ್ನು ಸಂರಕ್ಷಿಸುವ ಕ್ಷತ್ರಿಯರ ತೇಜಸ್ಸು ಸ್ವಾಭಿಮಾನಗಳಿಗೆ ಮೋಸಮಾಡಿದ್ದಾರೆ. ಆ ಮೋಸ-ಅಪಮಾನಗಳ ಹೊದಿಕೆಯಿಂದ, ಪ್ರಪಂಚವನ್ನೇ ಬೆಳಗುತ್ತಿದ್ದ ನಿಮ್ಮ ಕೀರ್ತಿ

ಯಶಸ್ಸುಗಳನ್ನು ಮರೆಮಾಡಿ ಬಿಟ್ಟಿದ್ದಾರೆ. ಈಗ ಆ ಭಯಾನಕ ಪ್ರಸಂಗಗಳನ್ನು ಪುನಃ ಉಚ್ಚರಿಸುವುದು ಬೇಡ. ನೀವು ಕೂಡ ಹೆಜ್ಜೆ ಹೆಜ್ಜೆಗೆ ಆ ವಿಷ ಪ್ರಸಂಗಗಳನ್ನು ಅನುಭವಿಸಿದ್ದೀರಿ. ನೀವು ಹೋದ ಮೇಲೆ, ಆ ಹಳೆಯ ಪೆಟ್ಟುಗಳ ನೆನಹಿನಿಂದ ನನ್ನ ಎದೆ ಮತ್ತೆಷ್ಟು ನೋಯುವುದೋ !

ರಾಜಪುತ್ರಾ, ನೀವು ದೇಶವಿದೇಶಗಳ ರಾಜರನ್ನು ಗೆದ್ದಿರಿ; ಅವರ ಅಪಾರ ಸಂಪತ್ತನ್ನು ತಂದು ಇಂದ್ರಪ್ರಸ್ಥದ ಭಾಂಡಾರವನ್ನು ಭರತಿ ಮಾಡಿದಿರಿ. ನಿಮ್ಮ ಮುಖದ ಮೇಲೆ ಆ ಪರಾಕ್ರಮದ ತೇಜ ತೋರುತ್ತಿಲ್ಲ. ಶರದೃತುವಿನ ಮಂಗಲಪ್ರಭಾತ ಆಕಾಶವನ್ನು ಮೋಡಗಳು ಮುಸುಕಿದಂತಾಗಿದೆ. ದುಷ್ಟ ದುಃಶಾಸನನ ಕೈಯಿಂದ ಕೆದರಿದ ಈ ಕೂದಲು ನಿಮ್ಮ ವೀರ್ಯ ಪೌರುಷಗಳನ್ನು ಅಣುಕಿಸುತ್ತಿವೆ. ಅನಾಥರನ್ನು ಕಾಪಾಡುವವರೇ ಕ್ಷತ್ರಿಯ, ಎಂದು ನೆನಪಿನಲ್ಲಿರಲಿ.

ಸೋಲಿನ ಧೂಳಿಯು ಸಂಪರ್ಕದಿಂದ ನಿಮ್ಮ ಸದ್ಗುಣಗಳೂ ಭಾಗ್ಯವೂ ಮಣ್ಣಲ್ಲಿ ಮುಚ್ಚಿದಂತಾಗಿವೆ. ನೈಮರೆತ ಸಿಂಹವನ್ನು ಮತ್ತಗಜವೊಂದು ಅಕಸ್ಮಾತ್ ಎರಗಿ ಗಾಯಗೊಳಿಸಿದಂತಾಗಿದೆ ನಿಮ್ಮ ಸ್ಥಿತಿ. ಆದರೂ ನಿಮ್ಮ ಶಕ್ತಿ ಸಂಪನ್ನತೆಯಿಂದ ಕಳೆದ ಭಾಗ್ಯವನ್ನು ಮರಳಿ ಪಡೆಯುವ ಭಾರ ನಿಮ್ಮ ಮೇಲೆಯೇ ಇದೆ. ಯಾವುದು ಸಾಮಾನ್ಯರಿಗೆ ಅಸಾಧ್ಯವೋ ಅದನ್ನು ಸಾಧ್ಯ ಮಾಡಿ ತೋರಿಸುವ ವೀರನನ್ನು ಅಸಾಮಾನ್ಯನೆಂದು ಎಲ್ಲರೂ ಹೊಗಳುತ್ತಾರೆ; ಅಡವಿಯಲ್ಲಿ ನಿಮಗೆ ಅಲ್ಲದ ಸಲ್ಲದ ಎಡರು ತೊಡರುಗಳು ಬರಬಹುದು, ಅವುಗಳನ್ನೆಲ್ಲ ಇಂದ್ರದೇವ ಪುತ್ರ ಪ್ರೇಮದಿಂದ ಪರಿಹರಿಸಲಿ! ನೀವು ತಪವನ್ನು ಆಚರಿಸುವ ಭೂಮಿ ಸಂಕಟಗಳಿಲ್ಲದೆ ಇರಬಹುದು, ಹಿತಕಾರಿಯೂ ಆಗಿರಬಹುದು. ಆದರೂ ನೀವು ಒಂಟಿಗರು, ಎಂದು ಮರೆಯಬೇಡಿರಿ. ಯಾವಾಗಲೂ ತುಂಬಾ ಎಚ್ಚರಿಕೆಯಿಂದ ಇರಬೇಕು. ಎಲ್ಲಿ ಹೋದರೂ ಸಜ್ಜನರನ್ನು ಪೀಡಿಸಬೇಕೆನುವ ದುರ್ಜನರು ಇದ್ದೇ ಇರುತ್ತಾರೆ.

ಆರ್ಯಪುತ್ರಾ, ಇನ್ನು ಹೋಗಿರಿ. ಮಹರ್ಷಿಗಳ ಮಾತಿನಂತೆ ಸಫಲ ಪ್ರಯತ್ನರಾಗಿರಿ; ನಮ್ಮೆಲ್ಲರ ಮನೋರಥವನ್ನು ಪೂರ್ಣ ಮಾಡಿರಿ. ನೀವು ಕೃತಕೃತ್ಯರಾಗಿ ಬರುವ ದಾರಿಯನ್ನೇ ನೋಡುತ್ತಿರುವೆ. ಆಗ ಪ್ರೇಮಭರದಿಂದ ನಿಮ್ಮ ಪಾದಗಳನ್ನು ಬಿಗಿದಪ್ಪುವೆ.

ದ್ರೌಪದಿಯ ಮಾತುಗಳಲ್ಲಿ ಉತ್ಸಾಹದ ಉಕ್ಕು ಇತ್ತು; ಅಪಮಾನದ ನೆನಪುಗಳ ಚುಚ್ಚೂ ಇತ್ತು. ಇವೆರಡರಿಂದಾಗಿ, ಪಾರ್ಥನ ಮುಖ ತೇಜಸ್ಸು ಪ್ರಜ್ವಲಿಸಹತ್ತಿತು.

ಹೊರಡುವ ಸಮಯ ಸಮೀಪಿಸಿತು. ಪುರೋಹಿತರು ಅರ್ಜುನನ ಮೈ ಮೇಲೆ ಶಸ್ತ್ರಾಸ್ತ್ರಗಳನ್ನು ತೊಡಿಸಿದರು. ಪರಿಣಾಮವಾಗಿ, ಪಾರ್ಥನ ಒಳಗಣ್ಣುಗಳ ಇದಿರಿಗೆ ತೋರಹತ್ತಿದರು. ಅವನ ಮುಖ ಕ್ರೋಧದಿಂದ ಗಂಭೀರವಾಯಿತು.

ಧನಂಜಯ ಹೊಳೆಹೊಳೆವ ಕನಚವನ್ನು ಧರಿಸಿದ; ಕೈಯಲ್ಲಿ ಶತ್ರುವಿಜಯಿಯಾದ ಗಾಂಡೀವ ಧನುಸ್ಸನ್ನು ತೆಗೆದುಕೊಂಡ; ಹಗೆಗಳು ಎಂದೆಂದಿಗೂ ಕಾಣದಿದ್ದ ಬೆನ್ನ ಮೇಲೆ ಬತ್ತಳಿಕೆಯನ್ನು ಏರಿಸಿಕೊಂಡ. ಬಳಿಕ ಗುಹ್ಯಕ ಯಕ್ಷನೊಡನೆ ಪಯಣ ಬೆಳೆಸಿದ, ಹಿಮಾಲಯದ ಕಡೆಗೆ.

ಆ ಸಮಯದಲ್ಲಿ ಎಲ್ಲ ದಿಕ್ಕುಗಳಿಂದಲೂ ದುಂದುಭಿ ಮೊಳಗಿದುವು. ದೇವತೆಗಳು ದೇವಲೋಕದಿಂದ ಹೂಮಳೆ ಕರೆದರು. ಸಮುದ್ರರಾಜ ತಿಳಿನೀರಿನ ತೆರೆಗಳಿಂದ ಭೂದೇವಿಯನ್ನು ಆಲಿಂಗಿಸಿದ. ಈ ಶುಭಲಕ್ಷಣಗಳಿಂದ ಅರ್ಜುನನ ಅಂತರಂಗ ಆನಂದದ ತೆರೆಗಳ ಮೇಲೆ ತೇಲಾಡುತ್ತಿತ್ತು.

—

## ೬. ತಪೋಭೂಮಿಯನ್ನು ತಲ್ಪಿದ

ಆಗ ಶರತ್ಕಾಲದ ಮಂಗಲ ಸಮಯ. ದಾರಿಯಲ್ಲಿ ಹಂಸಗಳು ಮಧುರವಾಗಿ ಕಿಂಕಿಣೀನಾದ ಮಾಡುತ್ತಿದ್ದುವು. ಬೆಳೆದು ನಿಂತ ಹೊಲ

ಗಳಿಂದ ಭೂದೇವಿ ನವಯುವತಿಯಂತೆ ಚೆಲುವಾಗಿದ್ದಳು. ಆ ಆನಂದ ವನ್ನು ಅನುಭವಿಸುತ್ತ ಅರ್ಜುನ ಯಕ್ಷನನ್ನು ಅನುಸರಿಸಿ ಹಿಮಾಲಯದ ಹಾದಿಯಲ್ಲಿ ಹೋಗುತ್ತಿದ್ದ. ದಾರಿಯಲ್ಲಿ ಹಳ್ಳಿಗಳು ಹತ್ತುತ್ತಿದ್ದುವು. ಅವುಗಳ ನೆರೆಯಲ್ಲಿ ಅರಳಿದ ಕಮಲಗಳನ್ನುಳ್ಳ ಕೆರೆ ಸರೋವರಗಳು ಕಂಗೊಳಿಸುತ್ತಿದ್ದುವು. ಹೊಲಗಳಲ್ಲಿ ಒಕ್ಕಲು ತರುಣಿಯರು ಬೆಳೆಗಾವಲು ಮಾಡುತ್ತಿದ್ದರು. ಅವರ ಚೆಂಡುಟಗಳು ತಲೆಯ ಮೇಲಿನ ಬಂದುಗೆ ಬಣ್ಣದೊಡನೆ ಮೇಲಾಟವಾಡುತ್ತಿದ್ದುವು. ಅವರು ಎತ್ತರದ ಎದೆಗೆ ರಕ್ತಚಂದನವನ್ನು ಬಳಿದುಕೊಂಡಿದ್ದರು. ಅದು ದುಡಿತದ ಬೆವರಿನಿಂದ ಕರಗಿ ಮೈಗೆಲ್ಲ ಮೆರುಗು ಕೊಟ್ಟಿತ್ತು. ಕಿವಿಗಳಲ್ಲಿ ನೇತು ಬಿಟ್ಟ ಹೂ ಸರಗಳು ಕಣ್ಣಿಗೂ ಕಾಂತಿಯನ್ನು ಒದಗಿಸಿದ್ದುವು.

ಆಕಳು ಕೆಚ್ಚಲು ಭಾರದಿಂದ ಮೆಲ್ಲಮೆಲ್ಲನೆ ನಡೆಯುತ್ತಿದ್ದುವು. ಹೋರಿಗಳು ಕೋಡುಗಳಿಂದ ಮಣ್ಣುಗುಡ್ಡೆಗಳನ್ನು ಚಿಮ್ಮುತ್ತಿದ್ದುವು. ಗೋವಳರೂ ಗೋವಳಿತಿಯರೂ ಗುಡಿಸಲುಗಳಲ್ಲಿ ಸರಳ ಜೀವನವನ್ನು ಸಾಗಿಸಿದ್ದರು. ಗೊಲ್ಲತಿಯರು ಗುಡಿಸಲುಗಳಲ್ಲಿ ಹಾಲು ಕರೆಯುವ, ಮೊಸರು ಕಡೆಯುವ ಸಂಭ್ರಮ ಅರ್ಜುನನಿಗೆ ಅಚ್ಚರಿಯನ್ನು ಹುಟ್ಟಿಸಿತು. ಮೊಸರು ಕಡೆಯುವಾಗ ಪಾತ್ರೆಗಳೊಳಗಿಂದ ಮೃದಂಗದ ಗಂಭೀರ ಧ್ವನಿ ಹೊರಬರುತ್ತಿತ್ತು. ಅದನ್ನು ಕೇಳಿ ಅಂಗಣದಲ್ಲಿಯ ನವಿಲುಗಳು ಮೇಘ ಗರ್ಜನೆಯೆಂದು ಭ್ರಮಿಸುತ್ತಿದ್ದುವು; ಕೂಡಲೆ ಕುಣಿಯುವುದಕ್ಕೆ ಆರಂಭಿಸುತ್ತಿದ್ದುವು. ಆ ನರ್ತನ ಪ್ರಸಂಗ ಅರ್ಜುನನ ಕಣ್ಮನಗಳಿಗೆ ಹಬ್ಬವನ್ನು ಉಂಟುಮಾಡಿತು.

ಆಗ ಮಳೆಗಾಲ ಮುಗಿದು ಹೋಗಿತ್ತು. ದಾರಿಯಲ್ಲಿ ಕೆಸರು–ಕೊಳಚೆಗಳು ಇರಲಿಲ್ಲ, ಅಲ್ಲಲ್ಲಿ ಹೂಗಳಿಂದ ಮುಚ್ಚಿದ ಮರಗಳು ವಾನಪ್ರಸ್ಥ ಆಶ್ರಮಿಗಳ ಆಶ್ರಮಗಳಂತೆ ಎಸೆಯುತ್ತಿದ್ದುವು. ಈ ಸೊಬಗನ್ನು ಸವಿಯುತ್ತ ಅರ್ಜುನ ಯಕ್ಷರು ಹಿಮಾಲಯದ ತಲವನ್ನು ತಲ್ಪಿದರು.

ಅದೆಷ್ಟು ಎತ್ತರ ಹಿಮಾಲಯ ಪರ್ವತ! ಅದರ ಎತ್ತರದ ಶಿಖರಗಳು ಬರ್ಫದಿಂದ ಮುಚ್ಚಿದ್ದುವು; ಮಳೆಸುರಿಸಿ ಬಿಳಿದಾದ ಮೋಡಗಳೋ ಎಂಬಂತೆ ಮನೋಹರವಾಗಿದ್ದುವು. ತಪ್ಪಲು ಪ್ರದೇಶ ಕಪ್ಪು ಕಪ್ಪನೆಯ ತೋಪುಗಳಿಂದ ಬೆಡಗಾಗಿತ್ತು. ಅದನ್ನು ನೋಡಿ, ಅರ್ಜುನನಿಗೆ, ಕಪ್ಪು ವಸ್ತ್ರಗಳನ್ನು ಧರಿಸಿದ ಬಿಳಿಬಣ್ಣದ ಬಲರಾಮನ ನೆನಪಾಗುತ್ತಿತ್ತು.

ಮಧ್ಯಮ ಪಾಂಡವನಿಗೆ ಗೆಲುವಿನಾಸೆ ಬಲವಾಗಿತ್ತು. ಬೇಗ ಬೇಗನೆ ಪರ್ವತವನ್ನು ಏರತೊಡಗಿದ. ಆ ವೇಗವನ್ನು ನೋಡಿದರೆ, ಈತನು ಮೇಲುಗಿರಿಯನ್ನು ಗೆಲ್ಲ ಹೊರಟಿದ್ದಾನೋ; ದಶದಿಕ್ಕುಗಳನ್ನು ಜಯಿಸಲು ಸಾಗುತ್ತಿದ್ದಾನೋ ಎನ್ನಿಸುವಂತಿತ್ತು. ಅವನ ಆ ಉತ್ಸಾಹವನ್ನು ನೋಡಿ ಯಕ್ಷ ಹೇಳಹತ್ತಿದ—

ಪಾಂಡುಪುತ್ರಾ, ಬರ್ಫದಿಂದ ಮುಚ್ಚಿದ ಮುಗಿಲೆತ್ತರದ ಅನಂತ ಆಕಾಶವನ್ನು ಅನೇಕ ತುಂಡುಗಳನ್ನು ಮಾಡುವಂತೆ ತೋರುತ್ತಿದೆ. ಇದರ ದರ್ಶನದಿಂದಲೇ ಪಾಪವೆಲ್ಲ ಪರಿಹಾರವಾಗುತ್ತಿದೆ; ಕಷ್ಟಗಳು ಕಳೆದು ಹೋಗುತ್ತಿವೆ.

ಭಗವತೀ ಪಾರ್ವತೀದೇವಿಯ ನಿವಾಸಸ್ಥಾನವಿದು. ಮೂರು ಲೋಕಗಳಲ್ಲಿಯೂ ಇದಕ್ಕೆ ಸರಿದೊರೆ ಇಲ್ಲ. ಭಗವಾನ್ ಶಂಕರನೂ ಇಲ್ಲಿಯೇ ತಪಸ್ಸು ಮಾಡುತ್ತಾನೆ. ಹುಟ್ಟು ಸಾವುಗಳಿಂದ ಬಿಡುಗಡೆಯನ್ನು ಬೇಡುವ ಮುಮುಕ್ಷುಗಳು ಇದೇ ಪರ್ವತಕ್ಕೆ ಬರುತ್ತಾರೆ; ಇಲ್ಲಿಯ ಗುಹೆಗಳಲ್ಲಿ ಕುಳಿತು ತಪಸ್ಸು ಮಾಡುತ್ತಾರೆ; ಆ ಕತ್ತಲೆಯಲ್ಲಿಯೇ ದಿವ್ಯಜ್ಞಾನದ ಬೆಳಕನ್ನು ಕಾಣುತ್ತಾರೆ. ಈ ಗೌರೀಶಂಕರ ಶಿಖರದ ಮೇಲೆಯೇ ಪಾರ್ವತೀ–ಪರಮೇಶ್ವರರ ವಿವಾಹ ಸಮಾರಂಭ ಸಾಂಗವಾಯಿತು. ಇಲ್ಲಿಯ ತರುಲತೆಗಳು ಎಂದೆಂದೂ ಬತ್ತುವುದಿಲ್ಲ, ಬಾಡುವುದಿಲ್ಲ....

ಮಾತಿನ ಭರದಲ್ಲಿಯೇ ಅವರು ತಪೋ ಭೂಮಿಯನ್ನು ತಲ್ಪಿದರು. ಆಗ ಯಕ್ಷ ಮಾತನ್ನು ಮುಂದುವರಿಸಿದ....

ಇಲ್ಲಿ ನಿನಗೆ ಯಾವ ವಿಘ್ನವೂ ಬರಲಾರದು. ಆದರೂ ಬಹಳ ಎಚ್ಚರಿಕೆಯಿಂದ ಇರಬೇಕು. ಸತ್ಕಾರ್ಯಗಳು ಸಹಜವಾಗಿ ಕೊನೆಗೊಳ್ಳುವುದಿಲ್ಲ. ಆಗಾಗ ಅಡೆತಡೆಗಳು ಹೆಡೆಯೆತ್ತಬಹುದು. ಅವುಗಳನ್ನು ಶಾಂತಿಯಿಂದಲೇ ನಿವಾರಿಸಬೇಕು. ಆಗ ಮಾತ್ರ ಗುರಿ ಸಾಧಿಸುವುದು. ನಿನ್ನ ಇಂದ್ರಿಯ ಕುದುರೆಗಳು ಅಡ್ಡ ಹಾದಿಯಲ್ಲಿ ಹರಿಯದಿರಲಿ! ದೇವರು ನಿನ್ನನ್ನು ಕಲ್ಯಾಣಕಾರಿ ಮಾರ್ಗದಲ್ಲಿ ಮುನ್ನಡೆಸಲಿ. ದೇವದೇವ ನಿನ್ನ ತಪಸ್ಸಿಗೆ ಸತ್ಫಲಗಳನ್ನು ದಯಪಾಲಿಸಲಿ!

—

## ೭. ಸುರಾಂಗನೆಯರಿಗೆ ಸೋಲಲಿಲ್ಲ

ಮಾತು ಮುಗಿಯುವಷ್ಟರಲ್ಲಿಯೇ ಯಕ್ಷ ಕಾಣದಾದ. ಅವನ **ಮಧುರ** ಸಹವಾಸವನ್ನು ನೆನೆಯುತ್ತ ಅರ್ಜುನ ಅತ್ತಕಡೆಗೇ ನೋಡುತ್ತ ನಿಂತ.

ಪಾರ್ಥ ಬಹಳ ಹೊತ್ತು ಖಿನ್ನನಾಗುವಂತೆ ಇರಲಿಲ್ಲ. ಮುಖವನ್ನು ಮೇಲೆತ್ತಿ ನೋಡಿದ. ಪವಿತ್ರ ಭಾಗೀರಥೀ ನದಿ ಹುಟ್ಟಿ ಬರುವ ಮೆಟ್ಟಿಲುಗಳು ಸೂರ್ಯ ಕಿರಣಗಳಿಂದ ತಳತಳಿಸುತ್ತಿದ್ದುವು. ಆಗ ಸೃಷ್ಟಿಯೆಲ್ಲವೂ ಅವನ ಶುಭಸಂಕಲ್ಪವನ್ನು ಬೆಂಬಲಿಸುವಂತೆ ತೋರುತ್ತಿತ್ತು. ಗಿಡಗಳು ಗಾಳಿಯ ಅಲೆತದಿಂದ ಜಯಧ್ವನಿಗೆಯ್ಯುತ್ತಿದ್ದುವು; ತಲೆಯಲ್ಲಾಡಿಸಿ ಹಾದಿಯಲ್ಲಿ ಹೂಗಳನ್ನು ಹಾಸುತ್ತಿದ್ದುವು. ಗಾಳಿ ಕಮಲಗಳ ಪರಾಗದಿಂದ ಸುವಾವಾಸನೆಯನ್ನು ಪಡೆದಿತ್ತು; ಭಾಗೀರಥಿಯ ತೆರೆಗಳಿಂದ ತಣ್ಣಗಾಗಿ ಆಪ್ತಮಿತ್ರನಂತೆ ಅವನನ್ನು ಅಪ್ಪಿಕೊಳ್ಳುತ್ತಿತ್ತು. ಹಂಸ ಸಾರಸಗಳ ಇನಿದನಿಗೂಡಿ ಸಳ ಸಳ ಹರಿಯುವ ಝುರಿಗಳು ಅರ್ಜುನನಿಗೆ ಮಂಗಲಗಾನವನ್ನು ಹಾಡುತ್ತಿದ್ದುವು. ಈ ಶುಭಶಕುನಗಳ ಮಧ್ಯದಲ್ಲಿಯೇ ಮಧ್ಯಮ ಪಾಂಡವ ಪರ್ವತವನ್ನು ಏರುತ್ತ ಏರುತ್ತ ತಪೋಭೂಮಿಯನ್ನು ಮುಟ್ಟಿದ. ಆ ಸಮನೆಲ ತಪಸ್ವಿಗಳ ಸಮುಚಿತ್ತದಂತೆ ನಿರ್ಮಲವಾಗಿತ್ತು.

ಪಾರ್ಥನ ತಪಸ್ಸು ಆರಂಭವಾಯಿತು. ಮನೋನಿಗ್ರಹದ ಫಲವಾಗಿ ಆತನ ತೇಜಸ್ಸು ಬಿದಿಗೆಯ ಚಂದ್ರನಂತೆ ಬೆಳೆಯತೊಡಗಿತು. ಅರ್ಜುನ ಸ್ವಲ್ಪ ಶ್ಯಾಮವರ್ಣದವನು. ಆತನು ಸ್ನಾನಮಾಡಿ ಕೂದಲನ್ನು ಒಣಗಿಸುತ್ತಿರುವಾಗ, ಸೂರ್ಯ ಪ್ರಕಾಶದಲ್ಲಿ ಹೊಂಗೆಯ ಮರದಂತೆ ಹೊಗರೇರುತ್ತಿದ್ದ. ಆತನು ಶಸ್ತ್ರಾಸ್ತ್ರಗಳನ್ನು ಧರಿಸಿದ್ದ; ಆದರೂ ಶಾಂತಿ-ಅಹಿಂಸೆಗಳ ಮೂರ್ತಿಯಾಗಿದ್ದ. ಆತನ ತಪಃಪ್ರಭಾವದಿಂದ— ಅನುಕೂಲ ಶೀತವಾಯು ಬೀಸುತ್ತಿತ್ತು; ಸೂರ್ಯ ಕಿರಣಗಳು ಶೀತಕಿರಣಗಳಾಗಿದ್ದುವು; ವೃಕ್ಷಗಳು ಫಲಭಾರದಿಂದ ಬಾಗಿದ್ದುವು; ನೆಲ ಹುಲ್ಲಿನ ಹಾಸಿಗೆಯಿಂದ ಹಂಸತುಪ್ಪಳದ ಸುಪ್ಪತ್ತಿಗೆ ಆಗಿತ್ತು. ಇಷ್ಟಾದರೂ ಅವನು ತನ್ನ ತಪಸ್ಸಿನ ಬಗೆಗೆ ಹೆಮ್ಮೆ ಪಡಲಿಲ್ಲ. ಆತನ ಲಕ್ಷವೆಲ್ಲ ಕೊನೆಯ ಫಲವನ್ನೇ ಬಯಸುತ್ತಿತ್ತು; ಹೊರತಾಗಿ, ಈ ಅನುಕೂಲತೆಯ ಹೂಗಳನ್ನಲ್ಲ. ಮಹಾಪುರುಷರು ಅಲ್ಪ ಲಾಭದಿಂದ ಎಂದೂ ಸಂತುಷ್ಟರಾಗುವುದಿಲ್ಲ.

ಅರ್ಜುನನ ತಪಸ್ಸಿನ ಸಫಲತೆ ಕಾಡಾಡಿಗಳನ್ನು ಕಂಗೆಡಿಸಿತು. ಅವರೆಲ್ಲ ಇಂದ್ರನ ಸುದ್ದಿಗಾರರು. ಆ ಪ್ರದೇಶದಲ್ಲಿಯ ವಿಚಿತ್ರ ಘಟನೆಗಳನ್ನು ಆಗಾಗ ತಮ್ಮ ಒಡೆಯನಿಗೆ ಅರಿಕೆ ಮಾಡಿಕೊಳ್ಳುತ್ತಿದ್ದರು. ಅದರಂತೆ, ವನಚರನೊಬ್ಬ ಓಡೋಡುತ್ತ ದೇವಲೋಕಕ್ಕೆ ಹೋದ; ದೇವೇಂದ್ರನಿಗೆ ಈ ವರದಿಯನ್ನು ಒಪ್ಪಿಸಿದ–

“ ಇಂದ್ರದೇವಾ, ತಮ್ಮ ಭೂಮಿಯಲ್ಲಿ ಯಾವನೋ ಪುರುಷ ವಿಜಯ ಪ್ರಾಪ್ತಿಗಾಗಿ ತಪಸ್ಸು ಮಾಡುತ್ತಿದ್ದಾನೆ. ಆ ತೇಜಸ್ವಿಯ ಮೈಮೇಲೆ ನಾರುಮಡಿಗಳಿವೆ. ಹೆಬ್ಬಾವಿನಂತೆ ಬಲಿಷ್ಠವಾದ ಭುಜಗಳ ಮೇಲೆ ಶತ್ರುಗಳನ್ನು ಸಂಹರಿಸಬಲ್ಲ ಬಲವಾದ ಬಿಲ್ಲನ್ನು ಹೊತ್ತಿದ್ದಾನೆ. ಆದರೂ ಅವನ ತಪಸ್ಸಾಮರ್ಥ್ಯ ಮುನಿಗಳನ್ನು ಮೀರಿಸುತ್ತಿದೆ. ಅವನ ಗುಣಗಳಿಗೆ ಮರುಳಾಗಿ ಎಲ್ಲ ಶಕ್ತಿಗಳೂ ಅಲ್ಲಿಯೇ ಆಶ್ರಯ ಪಡೆದಿವೆ. ಗಾಳಿ ಕಲ್ಯಾಣಕಾರಿಯಾಗಿದೆ, ಭೂದೇವಿ ಹಚ್ಚಹಸುರಿಯಾಗಿದ್ದಾಳೆ, ಆಕಾಶ ಸ್ವಚ್ಛವಾಗಿದೆ ಮತ್ತು ಧೂಳಿ ಎದ್ದಾಗ

ಮಳೆ ಬಂದು ಅದನ್ನು ಅಡಗಿಸುತ್ತಿದೆ! ಆನೆ–ಸಿಂಹಗಳು ಒಂದಾಗಿ ಆತನ ಸುತ್ತು ಸುಳಿಯುತ್ತಿವೆ. ಆತ ಹಣ್ಣುಗಳನ್ನು ಹರಿಯಲು ಕೈ ಎತ್ತಿದರೆ ಸಾಕು; ಮರಗಳು ತಾವಾಗಿಯೇ ಬಾಗಿ ಹಣ್ಣು ಕೊಡುತ್ತಿವೆ. ಎಷ್ಟು ದುಡಿದರೂ ಆತನಿಗೆ ದಣಿವೇ ಇಲ್ಲ. ಗೆಲವು ಅವನ ಅಂಗಾಂಗಗಳಲ್ಲಿ ಬಿಂಬಿಸಿಬಿಟ್ಟಿದೆ. ಮೊದಲ ನೋಟಕ್ಕೇ ಅವನೊಬ್ಬ ಮಹಾಪುರುಷನಂತೆ ಕಾಣುತ್ತಾನೆ. ಆತನೇನು ಋಷಿಯೋ, ವರವನ್ನು ಬೇಡಬಂದ ದೈತ್ಯರಾಜನೋ, ಯಾವುದೋ ಶ್ರೇಷ್ಠ ರಾಜವಂಶೀಯನೋ ಯಾವುದೂ ತಿಳಿಯದು. ಕಂಡುದನ್ನು ಕಂಡಂತೆ ಹೇಳಿರುವೆ, ತಪ್ಪಿದ್ದರೆ ಕ್ಷಮಿಸಬೇಕು.

ವನಚರನ ಹೇಳಿಕೆಯಿಂದ ಇಂದ್ರನಿಗೆ ಅತಿ ಆನಂದವಾಯಿತು. ಅರ್ಜುನ ಆತನ ಮಗನೇ ಅಲ್ಲವೇ? ಆದರೂ ಯಾವುದೂ ಗೊತ್ತಿಲ್ಲದಂತೆ ನಟಿಸಿದ. ಪದ್ಧತಿಯಂತೆ ಅಪ್ಸರೆಯರನ್ನು ಕರೆದು ಹೇಳಿದ:

ಸುರಾಂಗನೆಯರೇ, ಹಿಮಾಲಯದ ಎತ್ತರದ ಶಿಖರದಲ್ಲಿ ಯಾವನೋ ಕ್ಷತ್ರಿಯ ತಪಸ್ಸು ಮಾಡುತ್ತಿದ್ದಾನಂತೆ. ಆತನ ತಪಸ್ಸನ್ನು ಪರೀಕ್ಷಿಸಬೇಕಾಗಿದೆ. ಆ ಕಠಿನ ಕಾರ್ಯವನ್ನು ನಿಮಗೇ ಒಪ್ಪಿಸಬೇಕಾಗಿದೆ. ನೀವು ಅಲ್ಲಿಗೆ ಹೋಗಬೇಕು; ಬಗೆ ಬಗೆಯ ಶೃಂಗಾರ ಚೇಷ್ಟೆಗಳಿಂದ ಅವನ ತಪಸ್ಸನ್ನು ಅಗ್ನಿ ಪರೀಕ್ಷೆಗೆ ಗುರಿಮಾಡಬೇಕು, ಅವನಲ್ಲಿ ಶಸ್ತ್ರಗಳಿವೆ, ಎಂದಮೇಲೆ ಹಗೆಗಳನ್ನು ಗೆಲ್ಲುವ ಸಲುವಾಗಿಯೇ ತಪಸ್ಸು ಮಾಡುತ್ತಿರಬೇಕು. ಅವನು ವೀರ ಕ್ಷತ್ರಿಯನೆಂದು ಹೆದರಬೇಡಿರಿ. ಯಾವ ಶೂರನೂ ಹೆಂಗಳೆಯರನ್ನು ಹಿಂಸಿಸುವುದಿಲ್ಲ; ಹೋಗಿರಿ. ಹೆದರಿಕೆಯಿಲ್ಲದೆ ದೇವೇಂದ್ರನ ಅಪ್ಪಣೆಯನ್ನು ನೆರವೇರಿಸಿರಿ.

ಸುರಾಂಗನೆಯರು ದೇವೇಶನ ಸಂದೇಶವನ್ನು ಕೇಳಿಕೊಂಡರು. ಕೂಡಲೆ ಶಕ್ಯವಿದ್ದಷ್ಟು ಸೌಂದರ್ಯ ಸಾಧನೆಗಳನ್ನು ಇಟ್ಟುಕೊಂಡರು, ತೊಟ್ಟುಕೊಂಡರು. ಅರ್ಜುನನ ತಪೋಭೂಮಿಗೆ ಅವರ ಪಯಣ ಬೆಳೆಯಿತು.

ಪಾರ್ಥ ತಪಸ್ಸಿನಲ್ಲಿ ತೊಡಗಿದ್ದ. ಅಪ್ಸರೆಯರು ತಮ್ಮ ಶೃಂಗಾರ ಚೇಷ್ಟೆಗಳನ್ನು ಆರಂಭಿಸಿದರು. ಕಾಲ ಕಳೆಯುತ್ತಿತ್ತೇ ಹೊರತು, ಅವರ ಕಾಮನಾಟಕ್ಕೆ ಕಳೆಕಟ್ಟುತ್ತಿರಲಿಲ್ಲ. ಗ್ರೀಷ್ಮ, ವರ್ಷಾ ಮುಂತಾಗಿ ಒಂದರ ಹಿಂದೊಂದು ಎಲ್ಲ ಋತುಗಳೂ ಕಳೆದುವು. ಋತುಮಾನಕ್ಕನುಸರಿಸಿ ಬೇರೆ ಬೇರೆ ಬಗೆಯ ಶೃಂಗಾರ ಜಾಲಗಳನ್ನು ಬೀಸಿದರು. ಆದರೂ ಅರ್ಜುನ ಹಿಮಾಚಲದಂತೆ ಅಚಲನಾಗಿಯೇ ಕುಳಿತಿದ್ದ. ಸುರಾಂಗನೆಯರಿಗೆ ಸೋಲಲಿಲ್ಲ ಪ್ರತಿಯಾಗಿ ಸುರಾಂಗನೆಯರೇ ಕೈ ಸೋತರು. ತಮ್ಮ ಆಟ ಎಳ್ಳಷ್ಟೂ ನಡೆಯದೆಂದು ತಿಳಿದುಕೊಂಡರು. ಸರಿ. ಅವರು ನಿರಾಶರಾಗಿ ದೇವಲೋಕಕ್ಕೆ ಹಿಂದಿರುಗಿದರು; ತಮ್ಮ ಅಪಜಯದ ವಾರ್ತೆಯನ್ನು ವಿವರದೊಂದಿಗೆ ತಿಳಿಸಿದರು.

—

## ೮. ದೇವೇಂದ್ರ ದರ್ಶನ ಕೊಟ್ಟ

ದೇವೇಂದ್ರ ಎಲ್ಲವನ್ನು ಚಿತ್ತಗೊಟ್ಟು ಕೇಳಿದ. ಮಗನ ಗಟ್ಟಿ ಮನಸ್ಸಿನ ಬಗೆಗೆ ಬಹಳ ಅಭಿಮಾನಪಟ್ಟ. ಬಳಿಕ ತಾನು ಮುದುಕ ಬ್ರಾಹ್ಮಣನ ವೇಷವನ್ನು ಧರಿಸಿಕೊಂಡ; ಅರ್ಜುನನ ತಪೋಭೂಮಿಗೆ ತಾನೇ ಸಾಗಿಹೋದ.

ಅರ್ಜುನ ಆ ಬ್ರಾಹ್ಮಣನನ್ನು ನೋಡಿದ. ಬ್ರಾಹ್ಮಣ ದೂರದ ದಾರಿಯ ದಣಿವಿನಿಂದ ಬಳಲಿದಂತೆ ತೋರಿದ. ಅರ್ಜುನ ಎದ್ದು ಆತನಿಗೆ ಭಕ್ತಿಯಿಂದ ನಮಸ್ಕಾರ ಮಾಡಿದ; ಆ ವಿಚಿತ್ರ ವ್ಯಕ್ತಿಯನ್ನು ನೆಟ್ಟ ದೃಷ್ಟಿಯಿಂದ ನೋಡುತ್ತ ನಿಂತ. ವ್ಯಕ್ತಿಯ ದೇಹ ಮುಪ್ಪಿನಿಂದ ತೀರ ಹಣ್ಣಾಗಿತ್ತು. ಬಿಳಿಗೂದಲು ತಲೆಗಡ್ಡ ಮೀಸೆಗಳನ್ನು ಆವರಿಸಿದ್ದುವು. ಆದರೆ ಆತನ ಆತ್ಮ ತೇಜ ಅಂಗಾಂಗಗಳಲ್ಲಿ ಮಿರಮಿರನೆ ಮಿರುಗುತ್ತಿತ್ತು. ಅರ್ಜುನನಲ್ಲಿ ಭಕ್ತಿಭಾವ ತಾನಾಗಿಯೇ ಹುಟ್ಟಿತು. ಅವನು ತನ್ನ ತಂದೆಯೆಂದು ತಿಳಿಯುವಂತೆ ಇರಲಿಲ್ಲ. ಅವನನ್ನು

ಮುನಿವರ್ಯನೆಂದೇ ತಿಳಿದ; ಅರ್ಘ್ಯ-ಪಾದ್ಯಗಳಿಂದ ಸತ್ಕರಿಸಿದ; ಎತ್ತರದ ಆಸನದಲ್ಲಿ ಕುಳ್ಳಿರಿಸಿದ; ತಾನು ಭಕ್ತಿಯಿಂದ ಇದಿರಿಗೆ ಕುಳಿತ.

ಇಂದ್ರ ಅದೇ ವೇಷದಲ್ಲಿಯೇ ಮಾತನಾಡತೊಡಗಿದ—

ಮಗು, ಎಳೆತನದಲ್ಲಿಯೇ ಈ ತಪಸ್ಸನ್ನು ಆರಂಭಿಸಿರುವೆ. ಇದು ಒಳ್ಳೆಯದೇ. ಆದರೆ ಇಂದ್ರಿಯಗಳ ಸೆಳೆತ ಸಾಮಾನ್ಯವಲ್ಲ. ನನ್ನಂತಹ ಮುದುಕರೂ ಒಮ್ಮೊಮ್ಮೆ ದಾರಿ ತಪ್ಪುವ ಸಂಭವವಿದೆ. ನಿನ್ನ ರೂಪ ಭವ್ಯವಾಗಿದೆ; ಅದಕ್ಕೆ ತಕ್ಕಂತೆ ಶ್ರೇಷ್ಠ ಗುಣಗಳೂ ಉಂಟು. ಇದು ನಿನ್ನ ಪುಣ್ಯವೇ ಸರಿ. ಯೌವನ ಶರದೃತುವಿನ ಮೋಡದ ನೆರಳಿನಂತೆ ಚಂಚಲವಾಗಿದೆ. ಸಾಂಸಾರಿಕ ಸುಖಗಳು ಕೆಲಕಾಲ ಹಿತವಾಗಿ ತೋರಬಹುದು; ಪರಿಣಾಮದಲ್ಲಿ ಕಷ್ಟವನ್ನೇ ಕೊಡುತ್ತವೆ. ಮೃತ್ಯುವೇ ಆ ಕಷ್ಟಗಳಿಂದ ಕಡೆಗಾಣಿಸಬೇಕು. ಹೀಗೆ, ಆದಿಯಿಂದ ಅಂತ್ಯದ ವರೆಗೆ ಈ ಸಂಸಾರ ದುಃಖಮಯವಾಗಿದೆ. ಆದುದರಿಂದಲೇ, ವಿಚಾರಶೀಲ ಮನುಷ್ಯ ಮುಕ್ತಿಯನ್ನು ಹುಡುಕುತ್ತ ಮನೆ ಬಿಟ್ಟು ಹೊರಡುತ್ತಾನೆ.

ಕುಮಾರಾ, ನೀನೂ ಮೋಕ್ಷದ ಆಸೆಯಿಂದಲೇ ತಪಸ್ಸನ್ನು ಆಚರಿಸುತ್ತಿರುವಿ. ಇದು ನೀನು ಬುದ್ಧಿವಂತನೆಂದು ತೋರಿಸುತ್ತಿದೆ. ಆದರೆ ನಿನ್ನ ವೇಷ-ಭೂಷಣಗಳು ಮುಮುಕ್ಷುವಿಗೆ ವಿರುದ್ಧವಾಗಿವೆಯಲ್ಲ ! ಈ ಕವಚ ಬಿಲ್ಲು - ಬಾಣಗಳು ನೀನು ಯುದ್ಧವೇಷಿ ಎಂದು ಸಾರುತ್ತಿವೆ. ಯಮದಂಡದಂತೆ ಕೈಯಲ್ಲಿ ಕತ್ತಿಯನ್ನು ಏಕೆ ಹಿಡಿದಿರುವೆ ? ಎಂದಮೇಲೆ, ನಿನಗೆ ಇಂದ್ರಿಯಗಳನ್ನು ಗೆಲ್ಲುವುದು ಬೇಕಾಗಿಲ್ಲ; ಹಗೆಗಳನ್ನು ಗೆಲ್ಲುವುದು ಬೇಕಾಗಿದೆ- ಎಂದು ಹೇಳಬಹುದಾಗಿದೆ.

ಮುಕ್ತಿಗಾಗಿ ತಪಸ್ಸು ಮಾಡುವವರು ಶತ್ರುಗಳನ್ನು ಗೆಲ್ಲಬೇಕೆಂದು ಬಯಸಬಾರದು. ಅದರಿಂದ, ಗಂಗಾಜಲವನ್ನು ಅಪವಿತ್ರ ಕಾರ್ಯಕ್ಕೆ ಉಪಯೋಗಿಸಿದಂತೆ ಆಗುತ್ತಿದೆ. ನೀನು ನಿನ್ನ ಕಲ್ಯಾಣವನ್ನು ಬಯಸುತ್ತೀ. ಅದರಂತೆ, ಹೆರವರ ಕಲ್ಯಾಣವನ್ನು ಬಯಸು. ಹೆರವರಿಗೆ ಪೀಡೆ ಮಾಡಬೇಡ. ಸಿರಿ-ಸಂಪತ್ತು ಯಾರಿಗೂ ಎಂದೂ ಸ್ಥಿರವಲ್ಲ.

ಅವುಗಳ ತ್ಯಾಗವೇ ತಪಸ್ವಿಗೆ ಯೋಗ್ಯ. ಇಲ್ಲವಾದರೆ ನ್ಯಾಯ ನೀತಿಗಳ ಕೊಲೆ ಮಾಡಿದಂತೆ ಆಗುತ್ತಿದೆ.

ತಪಸ್ವಿಯೇ, ಇನ್ನಾದರೂ ಕಾದಾಡುವ ಕಟುನೀತಿಯನ್ನು ಬಿಟ್ಟು ಬಿಡು. ಇಲ್ಲವಾದರೆ ನಿನ್ನ ತಪಸ್ಸು ವ್ಯರ್ಥವಾದೀತು. ಒಂದು ವೇಳೆ ಹಗೆಗಳನ್ನು ಗೆಲ್ಲುವುದೇ ಬೇಕಾಗಿದ್ದರೆ, ಮೊದಲು ನಿನ್ನ ಇಂದ್ರಿಯಗಳನ್ನು ಗೆಲ್ಲು. ಆ ಮೇಲೆ ನೀನು ಜಗಜೆಟ್ಟಿಯಾಗುವಿ. ಮನೋವಿಕಾರಗಳನ್ನು ಜಯಿಸದಿದ್ದರೆ ಪರರ ದಾಸ್ಯ ತಪ್ಪಿದುದಲ್ಲ. ಮಗುವೇ, ಗಂಗಾಜಲದಿಂದ ಪವಿತ್ರವಾಗಿದೆ ಈ ಭೂಮಿ. ಇಲ್ಲಿ ತಪಸ್ಸು ಮಾಡುವವರಿಗೆ ಮೋಕ್ಷ ಸುಲಭಸಾಧ್ಯ. ಆದ್ದರಿಂದ, ಮೋಕ್ಷ ಮಾರ್ಗದಲ್ಲಿ ಅಡ್ಡಬರುವ ಈ ಆಯುಧಗಳನ್ನು ಚೆಲ್ಲಿಬಿಡು.

ದೇವರಾಜ ಮಾತನ್ನು ಮುಗಿಸಿದ. ಅರ್ಜುನ ಕೆಲಹೊತ್ತು ವಿಚಾರದಲ್ಲಿ ಕುಳಿತ. ಬಳಿಕ ಮಾತನಾಡತೊಡಗಿದ—

ಪೂಜ್ಯರೇ, ಈ ವರೆಗೆ ತಮ್ಮ ಪ್ರಸಾದಿಕ ತೇಜಸ್ವೀವಾಣಿಯಿಂದ ನನಗೆ ಸದುಪದೇಶ ಮಾಡಿದಿರಿ. ಇಂತಹ ವಿವೇಕದವಾದ ತಮ್ಮಂತಹ ಪೂಜ್ಯರಿಂದಲೇ ಸಾಧ್ಯ. ಆದರೆ ತಾವು ನನ್ನ ತಪಸ್ಸಾಧನೆಯ ಗುರಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ಇದನ್ನು ವಿಷಾದದಿಂದ ನಿವೇದಿಸಬೇಕಾಗಿದೆ. ನಾನು ಕ್ಷತ್ರಿಯ ವಂಶದಲ್ಲಿ ಹುಟ್ಟಿರುವೆ. ನನ್ನ ತಂದೆ ಪಾಂಡುರಾಜ. ಆದರೆ ಅಣ್ಣ ಧರ್ಮರಾಜ ಮೋಸಗಾರರ ಮಾತಿಗೆ ಮರುಳಾದ. ಲೆತ್ತದಾಟದಲ್ಲಿ ದೇಶಕೋಶಗಳನ್ನು ತನ್ನೊಡನೆ ತಮ್ಮಂದಿರನ್ನೂ ದಯಿತಾ ದ್ರೌಪದಿಯನ್ನು ಕೌರವರಿಗೆ ಸೋತು ಬಿಟ್ಟ. ದುರ್ಯೋಧನನ ತಮ್ಮ ನೀಚ ದುಃಶಾಸನ ತುಂಬಿದ ಸಭೆಯಲ್ಲಿ ನಮ್ಮ ಪತ್ನಿಯ ತುರುಬು ಹಿಡಿದು ಎಳೆದ; ಉಟ್ಟ ಸೀರೆಯನ್ನು ಸೆಳೆದ! ಸಭೆಯಲ್ಲಿದ್ದ ನೀತಿ ನಿಪುಣರೆಲ್ಲ ಬಾಯಿಗೆ ಬೀಗ ಹಾಕಿಕೊಂಡರು. ಆ ಅಪಮಾನ ಪ್ರಸಂಗದಲ್ಲಿ ದ್ರೌಪದಿ ನಿರ್ವೀರ್ಯರಾದ ನಮ್ಮನ್ನು–ಪತಿಗಳನ್ನು ನೋಡಲಾರದೆ ಕಣ್ಣು ಮುಚ್ಚಿದಳು! ಆ ತೇಜೋವಧೆಯನ್ನು ನೋಡುವುದು ಭೀಮಸೇನನಿಗಾಗಲಿ ನನಗಾಗಲಿ

ಸಾಧ್ಯವಾಗಲಿಲ್ಲ. ಆದರೆ ಶಾಂತ ಮೂರ್ತಿ ಧರ್ಮರಾಜ ನಮ್ಮೆಲ್ಲರ ಸಿಟ್ಟನ್ನು ಶಾಂತ ಮಾಡಿದ. ಆತನೂ ಶೂರನೇ ಇದ್ದಾನೆ; ಆದರೆ ನ್ಯಾಯನೀತಿಗಳನ್ನು ಬಿಡತಕ್ಕವನಲ್ಲ. ಆಟದ ಮೊದಲು ಮಾತು ಕೊಟ್ಟಂತೆ ನಾವು ವನವಾಸವನ್ನು ಅನುಭವಿಸಬೇಕಾಯಿತು.

ಒಮ್ಮೆ ವ್ಯಾಸ ಮಹರ್ಷಿಗಳು ನಮ್ಮಲ್ಲಿಗೆ ದಯಮಾಡಿಸಿದ್ದರು. ನಮ್ಮ ಸ್ಥಿತಿಗತಿ ಅವರಿಗೆ ಚೆನ್ನಾಗಿ ಗೊತ್ತು. ಕೌರವನ ಆಳಿಕೆ ಕೊನೆಗೊಳ್ಳಲೇಬೇಕೆಂದು ಅವರ ಅಭಿಪ್ರಾಯ. ಅದಕ್ಕೆ ಯುದ್ಧ ಅನಿವಾರ್ಯ. ಆ ಪೂರ್ವದಲ್ಲಿ ನಾನು ಇಂದ್ರದೇವನನ್ನು ಒಲಿಸಿಕೊಳ್ಳ ಬೇಕು; ಆತನಿಂದ ಶಕ್ತಿಶಾಲಿಯಾದ ಶಸ್ತ್ರಾಸ್ತ್ರಗಳನ್ನು ಪಡೆಯ ಬೇಕು— ಎಂದು ಅಪ್ಪಣೆ ಕೊಡಿಸಿದರು. ಅಣ್ಣ ಧರ್ಮರಾಜ ಅವರ ಆದೇಶವನ್ನು ಒಪ್ಪಿದ. ಆತನ ಅಪ್ಪಣೆಯ ಮೇರೆಗೆ ನಾನಿಲ್ಲಿ ಬಂದಿ ರುವೆ; ದೇವದೇವನನ್ನು ಒಲಿಸುವ ಕುರಿತು ತಪಸ್ಸನ್ನು ಆಚರಿಸುತ್ತಿ ರುವೆ. ಬಲವಾದ ಆಯುಧಗಳನ್ನು ದೊರಕಿಸುವುದೂ ಅವುಗಳ ಬೆಂಬಲದಿಂದ ಹಗೆಗಳನ್ನು ಹಣಿಯುವುದೂ ನನ್ನ ಗುರಿಯೇ ಆಗಿದೆ.

ಪೂಜ್ಯರೇ, ಶಕ್ತಿಹೀನ ಮನುಷ್ಯನಿಗೆ ಈ ಸಂಸಾರದಲ್ಲಿ ಬೆಲೆಯಿಲ್ಲ. ಶಕ್ತಿವಂತನಾದವನ ಜೀವನವೂ ಸಾರ್ಥಕ; ಅವನು ಹುಟ್ಟಿದ ವಂಶವೂ ಕೀರ್ತಿಶಾಲಿ. ಇಷ್ಟೇ ಅಲ್ಲ; ಆ ಪುರುಷ ರತ್ನದಿಂದಲೇ ಭೂದೇವಿ ವಸುಂಧರಾ ಎನಿಸಿಕೊಳ್ಳುತ್ತಾಳೆ. ಆತನ ಸಿಟ್ಟು ಸಿಡಿಲಿನಂತೆ ವೈರಿ ವೃಕ್ಷಗಳನ್ನು ಸುಟ್ಟು ಹಾಕುತ್ತಿದೆ. ಈ ಜಗತ್ತಿನಲ್ಲಿ ವೀರರಸಕ್ಕೆ ಅವನೇ ಉದಾಹರಣವಾಗುತ್ತಾನೆ. ತಂದೆಯೇ, ನನಗೆ ಸುಖ – ಸಂಪತ್ತು ಬೇಡ; ಮೋಕ್ಷವೂ ಬೇಕಾಗಿಲ್ಲ. ಶತ್ರುಗಳು ನಮ್ಮ ವಂಶದ ಮೇಲೆ ಅಪಯಶ–ಅಪಮಾನಗಳ ಕೆಸರನ್ನು ಸಿಂಪಡಿಸಿದ್ದಾರೆ. ಅದನ್ನು ಶತ್ರು ಸ್ತ್ರೀಯರ ಕಣ್ಣೀರಿನ ಪ್ರವಾಹದಿಂದ ತೊಳೆಯಬೇಕಾ ಗಿದೆ. ಇದರಿಂದ, ಸಜ್ಜನರು ನನ್ನನ್ನು ನೋಡಿ ನಗಬಹುದು; ಎಂಥ ಅಯೋಗ್ಯನಿಗೆ ಉಪದೇಶ ಮಾಡಿದೆನಲ್ಲ, ಎಂದು ನೀವೂ ಮರುಗ ಬಹುದು. ಅದರ ಪರವೆ ನನಗಿಲ್ಲ. ಶತ್ರುಗಳ ಸರ್ವನಾಶ ಮಾಡ

ಬೇಕು; ನಮ್ಮ ವಂಶ ಲಕ್ಷ್ಮಿಯನ್ನು ಉದ್ಧಾರ ಮಾಡಬೇಕು—ಇದೇ ನನ್ನ ಹೆಗ್ಗುರಿ.

ತನ್ನ ಕಳೆದ ಯಶಸ್ಸನ್ನು ತಿರುಗಿ ಗಳಿಸದೆ ಇದ್ದವನು ಹುಟ್ಟಿದರೂ ಹುಟ್ಟದಂತೆಯೇ; ಬದುಕಿದ್ದರೂ ಸತ್ತಂತೆಯೇ. ತಪೋಧನರೇ, ನೀರಡಸಿದ ಮನುಷ್ಯ ನೀರನ್ನೇ ನಿರೀಕ್ಷಿಸುತ್ತಿರುತ್ತಾನೆ. ಹಾಗೆಯೇ, ನನ್ನ ಹಿರಿಯ ಅಣ್ಣ ಶತ್ರು ವಿನಾಶದ ನನ್ನ ಪ್ರತಿಜ್ಞೆ ಪೂರಯಿಸುವ ಹಾದಿಯನ್ನೇ ಇದಿರು ನೋಡುತ್ತಿದ್ದಾರೆ. ಆ ಪೂಜ್ಯ ಬಂಧುವಿನ ಅಪ್ಪಣೆ ವ್ಯರ್ಥವಾಗುವಂತಿಲ್ಲ. ಎಂದ ಮೇಲೆ, ತಮ್ಮ ಹೇಳಿಕೆಯಂತೆ, ನಾನು ಕೇವಲ ಮುನಿವೃತ್ತಿಯನ್ನು ಧಾರಣ ಮಾಡುವುದು ಸಾಧ್ಯವೇ ಇಲ್ಲ. ಹಗೆಗಳನ್ನು ಗೆಲ್ಲುವ ಹೊಣೆಯನ್ನು ಹೊತ್ತಿದ್ದೇನೆ ನಾನು. ನನ್ನ ಕರ್ತವ್ಯ ಪಾಲನೆಯಲ್ಲಿ ಎಷ್ಟೇ ಕಷ್ಟಗಳು ಬರಲಿ. ಎಲ್ಲವುಗಳಿಗೂ ತಲೆಯೊಡ್ಡಿಯೇ ನಿಂತಿದ್ದೇನೆ. ಪೂಜ್ಯರೇ, ಹೆಚ್ಚಿಗಿನ್ನೇನು ಹೇಳಲಿ ? ನಾನು ನನ್ನ ಇಷ್ಟದೇವತೆಯಾದ ಸುರೇಂದ್ರನಿಂದ ಶಕ್ತಿವಂತ ಆಯುಧಗಳನ್ನು ಪಡೆದೇ ತೀರುವೆ; ಇಲ್ಲವಾದರೆ, ಇಲ್ಲಿಯೇ ನನ್ನ ಆಯುಷ್ಯದ ಅಂತ್ಯವನ್ನು ಮಾಡುವೆ. ಇದು ದೃಢ ಸಂಕಲ್ಪ !

ಅರ್ಜುನನ ವೀರ ವಾಕ್ಯಗಳಿಂದ ದೇವೇಂದ್ರನ ಮೈ ನವಿರೆದ್ದುವು. ಆತ ನಿಜವೇಷದಿಂದ ಪ್ರತ್ಯಕ್ಷನಾದ; ಮಗನನ್ನು ಬಿಗಿದಪ್ಪಿದ........

ಮಗು, ನಿನ್ನ ಉದ್ದೇಶ ಈಡೇರುವುದು ನಿಶ್ಚಿತ. ಶಕ್ತಿವಂತ ಆಯುಧಗಳು ಬೇಕಲ್ಲವೇ ? ಅದಕ್ಕಾಗಿ ಭಗವಾನ್ ಶಂಕರನ ಆರಾಧನೆ ಮಾಡು. ಆತನು ಪ್ರಸನ್ನನಾದರೆ ಸಾಕು. ನಾವೆಲ್ಲರೂ ಒಟ್ಟಾಗಿ ನಿನಗೆ ಹಲವಾರು ಶಸ್ತ್ರಾಸ್ತ್ರಗಳನ್ನು ಕೊಡುತ್ತೇವೆ. ಅವುಗಳಿಂದ, ಮುಂಬರುವ ಯುದ್ಧದಲ್ಲಿ ನಿಮಗೆ ನಿಶ್ಚಯವಾಗಿ ಜಯ ಸಿಕ್ಕುತ್ತಿದೆ; ನಿಮ್ಮ ರಾಜ್ಯ ಲಕ್ಷ್ಮಿ ಪುನಃ ನಿಮಗೆ ಕೈವಶವಾಗುತ್ತಾಳೆ !

—

## ೯. ಶಬರ ಶಂಕರ

ಇಂದ್ರನ ಅಪ್ಪಣೆಯಂತೆ ಅರ್ಜುನ ಸ್ನಾನ ಸಂಧ್ಯಾದಿಗಳನ್ನು ತೀರಿಸಿಕೊಂಡ; ಭಗವಾನ್ ಶಂಕರನ ಆರಾಧನೆಯನ್ನು ಆರಂಭಿಸಿದ. ಎಂತಹ ಉಗ್ರ ತಪಸ್ಸು ! ಸೂರ್ಯನ ಇದಿರಾಗಿ ಒಂಟಿಗಾಲಿನ ಮೇಲೆ ನಿಂತ. ಎಷ್ಟೋ ದಿವಸಗಳ ವರೆಗೆ ಅನ್ನವಿಲ್ಲ, ನಿದ್ದೆಯಿಲ್ಲ, ನೀರಡಿಕೆಯಿಲ್ಲ ! ಹಗಲೂ ರಾತ್ರಿಯೂ ಶಿವಾಯನಮಃ, ನಮಃ ಶಿವಾಯ ! ನಿಶ್ಚಲವಾದ ಪರ್ವತದಂತೆ ತೋರತೊಡಗಿದ. ಆತನ ತಪಸ್ಸೇ ಜೀವಧಾರಣಕ್ಕೆ ಅವಶ್ಯವಾದ ಅಮೃತವಾಗಿತ್ತು. ಅದರ ಬಲದಿಂದ ಆತ ಸಾತ್ತ್ವಿಕಗುಣ ಮೈಯುಂಡಿತು. ಪರಿಣಾಮವಾಗಿ, ಮೂರು ಲೋಕಗಳನ್ನು ಜಯಿಸಬಲ್ಲ ಶಕ್ತಿ ಆತನನ್ನು ಆಶ್ರಯಿಸಿತು. ಅವನ ಧೈರ್ಯ ಮೇರುಗಿರಿಗಿಂತ ಮಿಗಿಲಾಗಿತ್ತು. ಆತನ ಮೋರೆಯ ಮೇಲಿನ ತೇಜಸ್ಸು ಸೂರ್ಯ ಚಂದ್ರ ನಕ್ಷತ್ರಗಳ ಪ್ರಭೆಯನ್ನು ಪರಾಜಿತ ಮಾಡಿತ್ತು. ಹೆಗಲ ಮೇಲೆ ಬಿಲ್ಲು – ಬಾಣಗಳನ್ನು ಹೊತ್ತು ಕೆಂಪು ಜಟಾಧಾರಿಯಾದ ಅರ್ಜುನ ಪ್ರತ್ಯಕ್ಷ ಪರಶಿವನೇ ಎಂದು ತೋರುತ್ತಿದ್ದ. ಆತನಲ್ಲಿನನ್ನು ನೋಡಿ ಮುನಿಗಳು– ಈತನೇನು ಇಂದ್ರನೋ ಸೂರ್ಯನೋ ಅಗ್ನಿದೇವನೋ ಎಂದು ಸಂಶಯಪಡುತ್ತಿದ್ದರು.

ಅರ್ಜುನನ ತಪಸ್ಸಿನ ಉಗ್ರತೆ ಮುನಿಗಳಿಗೆ ತಡೆಯದಾಯಿತು. ಅವರು ಭಗವಾನ್ ಶಂಕರನಿಗೆ ಮೊರೆಯಿಟ್ಟರು. ಆಗ ಶಿವ ಧ್ಯಾನಸ್ಥನಾಗಿದ್ದ. ತಪಸ್ವಿಗಳು ಸ್ತುತಿ ಮಾಡುತ್ತ ನಿಂತರು. ದೇವ ಕಣ್ಣು ತೆರೆದ; ಕರುಣ ದೃಷ್ಟಿಯಿಂದ ಅವರನ್ನು ನೋಡಿದ. ಅವರು ತಮ್ಮ ಕಷ್ಟಗಳನ್ನು ಹೇಳಿಕೊಂಡರು–

ಪುರುಷೋತ್ತಮಾ, ವೃತ್ರಾಸುರನಂತೆ ವಿಶಾಲದೇಹಿಯಾದ ಯಾವನೋ ತಪಸ್ಸು ಮಾಡುತ್ತಿದ್ದಾನೆ. ಆತನ ತೇಜಸ್ಸು ಸೂರ್ಯಮಂಡಲವನ್ನು ಮೀರಿದೆ. ಮೈಮೇಲೆ ನಾರುಬಟ್ಟೆಗಳಿವೆ; ಹಾಗೆಯೇ ಬಿಲ್ಲು – ಬಾಣಗಳನ್ನು ಧರಿಸಿದ್ದಾನೆ. ಎಂಥ ವಿಚಿತ್ರ ತಪಸ್ವಿಯೋ !

ಅವನು ಕಾಲಿಟ್ಟರೆ ಸಾಕು, ನೆಲ ಕುಸಿದು ಹೋಗುತ್ತಿದೆ. ಬಹುಶಃ ಸಂಸಾರವನ್ನೇ ಸಂಹಾರ ಮಾಡುವ ರುದ್ರ ಶಕ್ತಿಯನ್ನು ಪಡೆಯಬೇಕೆಂದು ಇದ್ದಾನೋ ಏನೋ! ಅವನ ತಪಸ್ಸಿನ ತೇಜವನ್ನು ತಡೆದುಕೊಳ್ಳಲಾರೆವು. ದೇವಾ, ನೀವು ಬೇಗನೆ ನಮ್ಮ ಉದ್ಧಾರ ಮಾಡಲೇಬೇಕು.

ಭಗವಾನ್ ಶಂಕರ ಮುನಿಗಳ ಕರುಣಕತೆಯನ್ನು ಕೇಳಿಕೊಂಡ....

ಮುನಿಗಳೇ, ಅವನು ವಿಷ್ಣುವಿನ ಅಂಶರೂಪದ ಅವತಾರ. ಅವನೀಗ ಲೋಕ ಕಂಟಕರಾದ ಶತ್ರುಗಳನ್ನು ಗೆಲ್ಲಬೇಕಾಗಿದೆ ಅದಕ್ಕಾಗಿ ನನ್ನ ಆರಾಧನೆ ಮಾಡುತ್ತಿದ್ದಾನೆ. ಆತನಿಗೆ ಕೃಷ್ಣ ಬೆಂಬಲವಾಗಿದ್ದಾನೆ. ಇರಲಿ. ಈಗ ಮೂಕನೆಂಬ ದೈತ್ಯ ಕಾಡುಹಂದಿಯ ರೂಪ ತಾಳಿದ್ದಾನೆ; ಆ ತಪಸ್ವಿಯ ಮೇಲೆ ಏರಿ ಹೋಗುತ್ತಿದ್ದಾನೆ. ನಾನೂ ಕಿರಾತ ವೇಷದಿಂದ ಅಲ್ಲಿಗೆ ಹೋಗುತ್ತೇನೆ. ಅರ್ಜುನ ಮತ್ತು ನನ್ನ ಬಾಣಗಳಿಂದ ಮೂಕದಾನವ ಸಾಯುತ್ತಾನೆ. ಆ ಪ್ರಸಂಗದಲ್ಲಿ ಬೇಟೆಯ ನಿಯಮದಂತೆ ಅರ್ಜುನ ಮತ್ತು ನಾನು ದ್ವಂದ್ವಯುದ್ಧ ಮಾಡುತ್ತೇವೆ. ಆಗ ಅವನ ಪರಾಕ್ರಮವನ್ನು ನೀವೇ ನೋಡುವಿರೆಂತೆ.

ಸರಿ. ಶಂಕರ ಕಿರಾತ ವೇಷವನ್ನು ಕಟ್ಟಿಕೊಂಡ; ತಲೆಯ ಮೇಲೆ ಹೂಬಳ್ಳಿಗಳ ಸಿಂಬೆ, ಗಲ್ಲಗಳ ಎಡಬಲದಲ್ಲಿ ನವಿಲುಗರಿಗಳು, ಕೊರಳೊಳಗೆ ಗುಲಗಂಜಿಯ ಮಾಲೆ, ಮೈಗೆಲ್ಲ ರಕ್ತ ಚಂದನದ ಲೇಪನ, ಕೈಯಲ್ಲಿ ಬಿಲ್ಲು – ಬಾಣಗಳು,........! ಹುಟ್ಟಾ ಬೇಡನೇ ಎಂಬಂತೆ ತೋರುತ್ತಿದ್ದ ಶಿವ. ಗಣಂಗಳು ಬೇಡಪಡೆಯಾಗಿ ನಿಂತರು. ಅವರ ಕೋಲಾಹಲಕ್ಕೆ ಅಡವಿಯೆಲ್ಲ ಪ್ರತಿಧ್ವನಿ ಕೊಡುತ್ತಿತ್ತು. ಹಾಗೆಯೇ ಗರ್ಜನೆ ಮಾಡುತ್ತ ಅವರು ಅರ್ಜುನನ ತಪೋಭೂಮಿಯ ಕಡೆಗೆ ನಡೆದರು.

ಆ ಹೊತ್ತಿನಲ್ಲಿ, ಮೂಕವರಾಹ ಕೋರೆದಾಡೆಗಳಿಂದ ಭೂಮಿಯನ್ನು ಇರಿಯುತ್ತ ಘರ್ಘರ ಧ್ವನಿಯಿಂದ ಆರ್ಭಟಿಸುತ್ತ ಪಾರ್ಥನ

ಕಡೆಗೆ ಧಾವಿಸಿದ. ಅವನ ಬೆನ್ನ ಹಿಂದೆಯೇ ಶಬರ ಶಂಕರ ಶರ ಸಹಿತನಾಗಿ ಹೊರಟ.

ಅರ್ಜುನ ಆ ಕಾಡು ಹಂದಿಯನ್ನು ನೋಡಿದ. ಎಂತಹ ಭಯಂಕರ ಪ್ರಾಣಿ! ಇಡಿಯ ಪರ್ವತವನ್ನೇ ಪುಡಿಪುಡಿ ಮಾಡುವಂತೆ ಆರ್ಭಟಿಸುತ್ತಿದೆ! ಈ ಭಯಂಕರ ಜೀವಿಯನ್ನು ಕೊಲ್ಲಬಲ್ಲೆನೇ, ಎಂದು ಅರ್ಜುನನಿಗೆ ಸಂಶಯ ಹುಟ್ಟಿತು. ವರಾಹವು ಕಾಳಗಕ್ಕೆ ಕಾಲು ಕೆದರುತ್ತಿತ್ತು. ಬಹುಶಃ ಇದು ತನ್ನ ತಪಸ್ಸಿಗೆ ವಿಘ್ನವೇ ಇರಬಹುದೆಂದು ಆಲೋಚಿಸಿದ. ಈಗ ತಪಸ್ಸಿಗೆ ಬೇಕಾದ ಅಹಿಂಸಾ ವೃತ್ತಿಯನ್ನು ಅವಲಂಬಿಸುವಂತೆ ಇರಲಿಲ್ಲ. ಹಗೆಗಳಿಗೆ ಇದಿರಾಗಿ ಹೋರಾಡುವ ಕ್ಷತ್ರಿಯ ಕೆಚ್ಚನ್ನು ಕೆರಳಿಸಲೇ ಬೇಕಾಯಿತು. ವ್ಯಾಸ ಮುನಿಗಳು ಕೂಡ, ತಪಸ್ಸು ಮಾಡುವಾಗ ಶತ್ರುಗಳನ್ನು ಕಡೆಗಣಿಸ ಬೇಡ, ಎಂದು ಹೇಳಿದ್ದರು. ಈ ಪ್ರಬಲ ವೈರಿಯನ್ನು ನಾಶಮಾಡದೆ ತಪಸ್ಸನ್ನು ಸಾಗಿಸುವಂತೆ ಇರಲಿಲ್ಲ........

ಹೀಗೆ ವಿಚಾರಮಾಡುತ್ತ ಅರ್ಜುನ ಬಿಲ್ಲಿಗೆ ಹೆದೆಯೇರಿಸಿದ, ಬಾಣ ವನ್ನು ಹೂಡಿದ, ಗಾಂಡೀವದ ಭಯಂಕರ ನಾದ ಮಾಡಿದ, ಅವನ ವೀರಾಟೋಪವನ್ನು ನೋಡಿ ಪರಶಿವನಿಗೆ ಪರಮಾನಂದವಾಯಿತು. ಅದೇ ಹೊತ್ತಿಗೆ ತಾನೂ ಪಿನಾಕ ಧನುಸ್ಸಿಗೆ ಬಾಣ ಹೂಡಿ ನಿಂತ. ಸರ್ಪಬಾಣದ ಬಾಯಿಂದ ಅಗ್ನಿಜ್ವಾಲೆಗಳು ದೂರ ದೂರ ಸಾರುತ್ತಿದ್ದುವು.

ಈಗ ಮೂಕವರಾಹನಿಗೆ ಉಳಿಗಾಲವೇ ಇಲ್ಲ. ಒಂದು ಕಡೆಗೆ ಧನುರ್ಧಾರಿಯಾದ ಪ್ರಲಯರುದ್ರ, ಮತ್ತೊಂದು ಕಡೆಗೆ ಮೂಲೋಕ ವನ್ನು ಮಣ್ಣು ಮುಕ್ಕಿಸಬಲ್ಲ ಗಾಂಡೀವಿ! ಮೊದಲಿಗೆ ಪಿನಾಕ ಪಾಣಿಯ ಉರಿಗೋಲು ದಾನವನ ದೇಹವನ್ನು ಹೊಕ್ಕಿತು; ಭಯಂ ಕರ ಗಾಯ ಮಾಡಿತು. ಅದೇ ಹೊತ್ತಿಗೆ ಅರ್ಜುನನ ಮಾರಕಾಸ್ತ್ರ ಮೂಕವರಾಹನನ್ನು ಗತಿಗಾಣಿಸಿತು! ಗಾಯಾಳುವಾದ ಮೂಕವ ರಾಹ ನೆಲಮುಗಿಲು ಬಿರಿಯುವಂತೆ ಆರ್ಭಟಿಸುತ್ತ ನೆಲಕ್ಕೆ ಒರಗಿದ.

ಬಿಸಿನೆತ್ತರು ಬುಗ್ಗೆಯಾಗಿ ಪುಟಿಯುತ್ತಿತ್ತು ಅವನ ಮೈಯಿಂದ. ಅವನು ಕೆಂಪಡರಿದ ಕಣ್ಣುಗಳಿಂದ ಅರ್ಜುನನನ್ನು ನೋಡುತ್ತಲೇ ಪ್ರಾಣನೀಗಿದ !

ಅರ್ಜುನನಲ್ಲಿ ಅನೇಕ ಬಾಣಗಳಿದ್ದುವು. ಆದರೂ ಶತ್ರು ವಿಜಯಿಯಾದ ಆ ಬಾಣದ ಮೇಲೆ ಅವನ ಪ್ರೇಮ ಅಪಾರವಾಯಿತು. ಅದನ್ನು ತಿರುಗಿ ತರಲು ವರಾಹದ ಹತ್ತಿರಕ್ಕೆ ನಡೆದ; ಅದರ ಮೈಯಲ್ಲಿ ನಟ್ಟ ಬಾಣವನ್ನು ಕಿತ್ತುಕೊಂಡ.

ಅದೇ ಹೊತ್ತಿಗೆ ಶಬರ ಶಂಕರನ ದೂತನೊಬ್ಬ ಅಲ್ಲಿಗೆ ಬಂದ; ತನ್ನ ಸ್ವಾಮಿಯ ಆಜ್ಞೆಯನ್ನು ತಿಳಿಸಿದ.

ನಿಮ್ಮನ್ನು ನೋಡಿದರೆ ದೇವಾಂಶ ಸಂಭೂತರಂತೆ ಕಾಣುತ್ತೀರಿ. ತಪಸ್ವಿಗಳ ಸರ್ವ ಶುಭಲಕ್ಷಣಗಳೂ ನಿಮ್ಮಲ್ಲಿ ತೋರುತ್ತಿವೆ. ಮೋಕ್ಷಲಕ್ಷ್ಮಿ ನಿಮ್ಮಿಂದ ದೂರವಿಲ್ಲ. ನಿಮ್ಮಂತಹ ತ್ಯಾಗ ಮೂರ್ತಿಗಳು ನಮ್ಮ ಒಡೆಯನ ಬಾಣವನ್ನು ಅಪಹರಣ ಮಾಡಬಾರದು. ನ್ಯಾಯದಿಂದ ನಡೆಯಬೇಕಾದುದೇ ಮಾನವಧರ್ಮ. ಈಗ ನೀವು ದುರ್ಲೋಭದಿಂದ ಆ ಬಾಣವನ್ನು ತೆಗೆದುಕೊಂಡಿರೆಂದು ಹೇಳಲಾರೆ, ನಿಮ್ಮ ಬಾಣವೂ ಹಾಗೆಯೇ ಇದ್ದಿರಬಹುದು. ಆದರೂ ಅದು ನಮ್ಮ ಒಡೆಯನ ಬಾಣ. ಅದನ್ನು ತಿರುಗಿ ಕೊಡಬೇಕು....

ಹಾಗೆಯೇ, ಈ ಬೇಟೆ ನಮ್ಮ ಒಡೆಯನಿಗೇ ಸಲ್ಲಬೇಕು. ಆತನೇ ಇದನ್ನು ಕೊಂದವನು. ಒಮ್ಮೆ ಸತ್ತ ಪ್ರಾಣಿಯನ್ನು ಮತ್ತೆ ಕೊಲ್ಲುವುದು ಶೂರರಿಗೆ ಸಲ್ಲದು. ಒಬ್ಬರ ಶ್ರೇಯಸ್ಸನ್ನು ಮತ್ತೊಬ್ಬ ಅಪಹರಿಸಬೇಕೆನುವುದು ಸಜ್ಜನರ ಲಕ್ಷಣವಲ್ಲ. ನಮ್ಮ ಒಡೆಯ ಈ ಭಯಂಕರ ಜೀವಿಯನ್ನು ಸಂಹರಿಸದಿದ್ದರೆ ನಿಮ್ಮ ಅವಸ್ಥೆ ಏನಾಗುತ್ತಿತ್ತೋ ! ಏಕೆಂದರೆ, ಇಂತಹ ವಜ್ರ ದೇಹಿಯನ್ನು ಕೊಲ್ಲುವುದು ನಿಮ್ಮಂತಹ ಸಾಮಾನ್ಯರಿಂದ ಸಾಧ್ಯವೇ ಇಲ್ಲ. ಆದುದರಿಂದ, ನಿಮ್ಮ ಉಪಕಾರ ಕರ್ತನಿಗೆ ತಿರುಗಿ ನಿಲ್ಲುವುದು ಸಜ್ಜನಿಕೆಗೆ ಶೋಭಿಸುವುದಿಲ್ಲ. ನಿಮ್ಮ ತಪಸ್ಸಿನ ಉದ್ದೇಶ ಶತ್ರುವಿಜಯ; ಮೋಕ್ಷವಲ್ಲ !

ಈಗ ನಮ್ಮ ಒಡೆಯನ ಮಿತ್ರತ್ವವನ್ನು ಗಳಿಸಿದರೆ ನಿಮಗೆ ತಪಸ್ಸಿನ ಫಲವೆಲ್ಲ ಸಿದ್ಧಿಸುವುದು. ಇಷ್ಟು ಮಾತ್ರದಿಂದ, ನಮ್ಮ ಒಡೆಯನಲ್ಲಿ ಇದೊಂದೇ ಬಾಣವಿದೆ ಎಂದು ತಿಳಿಯಬೇಡಿರಿ. ಇದನ್ನು ಮೀರಿಸುವ ಹಲವಾರು ಬಾಣಗಳು ಆತನಲ್ಲಿವೆ. ಬೇಡುವ ರೀತಿಯಲ್ಲಿ ಬೇಡಿದರೆ ಏನೆಲ್ಲವನ್ನೂ ಕೊಡಬಲ್ಲ. ಅದರಿಂದ, ಮೂರು ಲೋಕಗಳನ್ನೇ ಗೆಲ್ಲಬಲ್ಲಿರಿ. ಹೀಗಿರುವಾಗ, ಈ ಬೇಟೆ ನಿಮ್ಮದೆಂದು ಹೇಳುತ್ತಿದ್ದೀರಿ; ಮಹಾ ಅಪರಾಧ ಮಾಡುತ್ತಿದ್ದೀರಿ. ಬಹಳ ಮಾಡಿ, ನೀವು ಶಸ್ತ್ರ ವಿದ್ಯೆಯ ನಿಯಮಗಳಿಗೆ ಹೊಸಬರೆಂದು ತೋರುತ್ತಿದೆ. ಈ ಕಾರಣದಿಂದಲೇ, ನಮ್ಮ ಒಡೆಯ ನಿಮ್ಮನ್ನು ಕ್ಷಮಿಸಿದ್ದಾನೆ.

ಒಂದುವೇಳೆ, ನೀವು ಬಹಳ ಶೂರರೆಂದು ಹೆಮ್ಮೆ ಪಡುತ್ತಿರಬಹುದು; ಹಾಗೆಯೇ, ಕಾಡು ಬೇಟೆಯನ್ನು ಯಾರೂ ಮಾಡಬಹುದೆಂದು ತಿಳಿದಿರಬಹುದು. ಈಗ ಆ ಹೆಮ್ಮೆಯನ್ನು ನಿರ್ಣಯಿಸುವುದಕ್ಕೆ ಅವಕಾಶವಿಲ್ಲ. ಆದರೆ ಈ ಕಾಡಿನ ಒಡೆತನವನ್ನು ಇಂದ್ರದೇವ ನಮ್ಮ ಸೇನಾಪತಿಗೆ ಸಮರ್ಪಿಸಿದ್ದಾನೆ. ನೀವು ಮುನಿಗಳು. ಆದುದರಿಂದ ನಮ್ಮ ಒಡೆಯನಿಗೆ ನಿಮ್ಮ ಮೇಲೆ ಆಗ್ರಹವಿಲ್ಲ. ಆದುದರಿಂದ ನಮ್ಮ ಬಾಣ – ಬೇಟೆಗಳನ್ನು ಕೊಟ್ಟು ಬಿಡಿರಿ; ನಮ್ಮ ಸ್ವಾಮಿಯ ಸ್ನೇಹವನ್ನು ಸಂಪಾದಿಸಿರಿ. ಆತನೂ ದೂರದಲ್ಲಿಲ್ಲ. ಪಡೆಯಿಂದ ಒಡಗೂಡಿ ಧನುರ್ಧಾರಿಯಾಗಿ– ಅಗೋ, ಆ ಮರದ ಕೆಳಗೆ ನಿಂತಿದ್ದಾನೆ. ಹೂಂ, ಬೇಗ ಬನ್ನಿರಿ........

---

## ೧೩. ಕಿರಾತರು ಕಾಲ್ಕೆದರು

ಕಿರಾತನ ಮಾತುಗಳಿಂದ ಅರ್ಜುನನಿಗೆ ಅಪಮಾನವೆನಿಸಿತು. ಆತನ ಕೋಪ ಕೆರಳಿತು. ಕಾದಾಡುವ ಕಿಚ್ಚು ಹೊತ್ತಿತು. ಆದರೂ ತಾಳ್ಮೆ ತಪ್ಪಲಿಲ್ಲ. ಸನ್ನಿವೇಶಕ್ಕೆ ತಕ್ಕಂತೆ ಶಾಂತಿಯಿಂದಲೇ ಉತ್ತರ ಕೊಟ್ಟ—

ಸುಂದರವಾದ ಶಬ್ದಗಳಿಂದ ಶತ್ರುಗಳನ್ನು ಗೆಲ್ಲುವುದು ಪುಣ್ಯಾತ್ಮರಿಗೇ ಸಾಧ್ಯ. ಸಮರ್ಥವಾದ ಶಬ್ದ-ಅರ್ಥಗಳನ್ನು ಹೊಂದಿಸುವುದು ಸಾಮಾನ್ಯರಿಗೆ ಸುಲಭವಲ್ಲ. ಹೀಗಿದ್ದರೂ ನೀನು ನಿಮ್ಮ ಸ್ವಾಮಿ ಕಾರ್ಯವನ್ನು ಸುಂದರವಾದ ಸಮರ್ಥ ವಾಣಿಯಲ್ಲಿ ತಿಳಿಸಿರುವಿ. ಈ ಬಾಣದ ಮೇಲೆ ನಿಮ್ಮ ಒಡೆಯನ ಅಧಿಕಾರವಿಲ್ಲ. ಆದರೂ ಈ ಅನ್ಯಾಯವನ್ನು ನ್ಯಾಯ ಎನುವಂತೆ ಕಲಾಪೂರ್ಣವಾಗಿ ಮಾತನಾಡಿದಿ. ನೀನು ಸ್ವಾಮಿನಿಷ್ಠ ಸೇವಕನೆಂದು ಹೇಳಿಕೊಳ್ಳುತ್ತೀ. ಹಾಗಿದ್ದರೆ, ಆತನನ್ನು ಅನ್ಯಾಯ ಮಾಡದಂತೆ ತಡೆಯುವುದು ನಿನ್ನ ಕೆಲಸವಾಗಿತ್ತು. ನಾನು ಖಾಂಡವ ವನವನ್ನು ಸುಟ್ಟುಹಾಕಿದೆ. ಆಗ ಅಗ್ನಿದೇವನಿಂದ ಅನೇಕ ಪ್ರಬಲ ಶಸ್ತ್ರಾಸ್ತ್ರಗಳು ನನಗೆ ದೊರಕಿವೆ. ಎಂದಮೇಲೆ, ಬಡ ಬೇಡನ ಬಾಣವನ್ನು ನಾನು ಅನ್ಯಾಯವಾಗಿ ಬೇಡಬೇಕಾಗಿಲ್ಲ........

ಅಡವಿಯ ಮೇಲೆ ನಿಮ್ಮ ಒಡೆಯನ ಅಧಿಕಾರವಿರಬಹುದು. ಆದರೆ ಕಾಡಿನಲ್ಲಿ ಬೇಟೆಯಾಡಲು ಯಾರಿಗೂ ಅಡ್ಡಿಯಿಲ್ಲ. ಅಲ್ಲದೆ, ಆ ಪ್ರಾಣಿ ನನ್ನ ಮೇಲೆಯೇ ಏರಿ ಬಂದಿತು. ಅದರಿಂದ, ನಾನೇ ಅದನ್ನು ಕೊಂದು ಹಾಕಬೇಕಾಯಿತು, ಹಾಕಿದೆ. ಸಂಕಟದಲ್ಲಿ ಸಿಕ್ಕವನು ನಾನು. ಅದರ ಪರಿಹಾರಕ್ಕೆ ನಿಮ್ಮ ಒಡೆಯ ಬಾಣ ಬಿಟ್ಟನೆಂದು ಹೇಳುವುದು ಅದ್ಭುತ ಅಸತ್ಯ. ಇಂತಹ ಸುಳ್ಳುಗಾರನಿಂದ ನಾನು ಬಾಣಗಳನ್ನು ಪಡೆಯಬೇಕೇ? ಅವು ನನಗೇ ಬೇಕೇ ಆಗಿದ್ದರೆ ನಿಮ್ಮ ಒಡೆಯನನ್ನೇ ಸೋಲಿಸುವೆ; ಆ ಶಸ್ತ್ರಾಸ್ತ್ರಗಳನ್ನು ಕಿತ್ತುಕೊಳ್ಳುವೆ. ಬಹುಶಃ ಅವನಲ್ಲಿ ಅಂತಹ ಸಂಗ್ರಹ ಇಲ್ಲದಿರಬಹುದು. ಬೇಕಿದ್ದರೆ ಕೇಳು– ಬೇಕಾದಷ್ಟು ಬಾಣ–ಬಿಲ್ಲು, ಖಡ್ಗ-ಕವಚಗಳನ್ನು ಕೊಡುವೆ. ಆತನಲ್ಲಿ ನನ್ನನ್ನು ಕೆಣಕುವ ಪರಾಕ್ರಮವಿದೆಯೇ? ಹಾಗಿದ್ದರೆ ಬಾಯ್ಮಾತಿನ ಬುರುಡೆಯನ್ನು ಬಿಡುವ ನಿನ್ನನ್ನೇಕೆ ಕಳಿಸುತ್ತಿದ್ದ. ಅವನ ಇಚ್ಛೆಯಿದ್ದರೆ ನಾನು ಸಿದ್ಧನೇ ಇದ್ದೇನೆ. ಇದೇ ಯೋಗಭೂಮಿ ಕಾಳೆಗದ ಕಣವಾಗಲಿ. ಇದಿರಾಗಲಿಕ್ಕೆ ತಿಳಿಸು........

ಕಿರಾತ ಸೇನಾಪತಿಯು ಸಂಗಡ ಸ್ನೇಹವಂತೆ. ಎಂತಹ ಅಸಂಬದ್ಧ ವಚನ. ಅವನೊಬ್ಬ ಕಾಡಾಡಿ ಅನಾರ್ಯ; ನಾನು ನಾಡಾಡಿ ಕ್ಷತ್ರಿಯ ವೀರ. ಅವರು ತನ್ನ ಕಾಡು ಬುದ್ಧಿಗೆ ತಕ್ಕಂತೆ ಏನೇನೋ ಬೆದರು ನುಡಿಗಳನ್ನು ಹೇಳಿದ್ದಾನೆ. ಅವನ ಅಜ್ಞಾನಕ್ಕೆ ನನಗೆ ಸಿಟ್ಟಿಲ್ಲ. ಅವನನ್ನು ಕ್ಷಮಿಸಿದ್ದೇನೆ, ಎಂದು ತಿಳಿಸು. ಕ್ಷುದ್ರರೊಡನೆ ಕಾದು ವುದರಲ್ಲಿ ಕೀರ್ತಿಯಿಲ್ಲ; ಸ್ನೇಹ ಸಂಪಾದನೆಯಲ್ಲಿ ಶ್ರೇಯಸ್ಸಿಲ್ಲ. ಈಗ ಬಾಣ— ಬೇಟೆಗಳನ್ನು ಬೇಡುವ ಆಸೆಯನ್ನು ಬಿಟ್ಟು ಬಿಡು. ಬಂದ ಹಾದಿಯಿಂದ ತಿರುಗಿ ಹೋಗು. ಇದಕ್ಕೂ ಮೀರಿ ನಿಮ್ಮ ಸೇನಾಪತಿಗೆ ಕಾದಾಡುವ ಹಂಬಲವಿದ್ದರೆ........ ಪಾಪ, ಪಾಪ ! ಆದಿಶೇಷನ ಹೆಡೆಯ ರತ್ನವನ್ನು ಕಿತ್ತುಕೊಳ್ಳಬೇಕು ಎನುವವನ ಗತಿಯೇ ಅವನಿಗೂ ಆದೀತು !

ಕಿರಾತ ದೂತ ಅರ್ಜುನನಿಗೆ ಉತ್ತರವಾಗಿ ಕಾಳೆಗದ ಕರೆಯನ್ನೇ ಕೊಟ್ಟ; ಹಾಗೆಯೇ ಹೋಗಿ ತನ್ನ ಸ್ವಾಮಿಗೆ ಎಲ್ಲವನ್ನೂ ನಿವೇದಿಸಿದ.

ಶಬರ ಶಂಕರ ವೀರಗರ್ಜನೆ ಮಾಡಿದ. ಕಿರಾತಗಣ ಕೇಕೆಯಿಂದ ವನವನ್ನು ತುಂಬಿತು. ಒಡೆಯನ ಅಪ್ಪಣೆಯಂತೆ ಬೇಡಪಡೆ ಮುಂದೆ ಸಾಗಿತು. ಅವರ ಬಿಲ್ಲುಗಳ ಠಂಕಾರ, ಹಿಮಾಲಯದ ಗಿರಿ–ಕಂದರ ಗಳಲ್ಲಿ ಪಡಿಮೂಡುತ್ತಿತ್ತು. ಅವರ ನಡುವೆ ಪಿನಾಕ ಧನಸ್ಸನ್ನು ಜೇವೊಡೆಯುತ್ತ ಶಬರ ಶಂಕರ ಸಾಗಿದ್ದ. ಅವರ ಆವೇಶದಲ್ಲಿ ಹಾದಿಯ ತಗ್ಗು-ಮಿಟ್ಟೆಗಳ ಪರವೆ ಇರಲಿಲ್ಲ. ನಾಮುಂದೆ ತಾಮುಂದೆ ಎಂದು ಹೆಜ್ಜೆ ಹಾಕುತ್ತಿದ್ದರು. ಅವರ ಕಾಲ್ತುಳಿತಕ್ಕೆ ಗಿಡ–ಬಳ್ಳಿಗಳು ನೆಲವನ್ನು ಅಪ್ಪಿಕೊಳ್ಳುತ್ತಿದ್ದುವು.

ಬೇಡಪಡೆ ಅರ್ಜುನನ ತಪೋಭೂಮಿಗೆ ಬಂದಿತು. ಅರ್ಜುನ ತಪಸ್ಸು ಮಾಡಿ ಮಾಡಿ ಸೊರಗಿ ಹೋಗಿದ್ದ. ಅವನ ತೇಜಸ್ಸು ಮಾತ್ರ ಪ್ರಲಯಾಗ್ನಿಯಂತೆ ಪ್ರಜ್ವಲಿಸುತ್ತಿತ್ತು. ಕೈಯಲ್ಲಿಯ ಗಾಂಡೀವ ಧನುಸ್ಸು ಘನಗಂಭೀರವಾಗಿ ಗರ್ಜಿಸುತ್ತಿತ್ತು. ಅವನು ಕಾಳೆಗಕ್ಕೆ ಅಣಿಯಾಗಿಯೇ ನಿಂತಿದ್ದ. ಇದಿರಿಗೆ ಬರುವ ಶಬರ ಪಡೆಯನು

ನೋಡಿದ. ಎಂತಹ ಕ್ಷುದ್ರ ಶತ್ರುಗಳಿವರು— ಎಂದು ತಿರಸ್ಕಾರದ ನೋಟವನ್ನು ಬೀರಿದ. ಇಂತಹರನ್ನು ಜಯಿಸುವುದಕ್ಕೆ ತನ್ನ ಒಂದೇ ಒಂದು ಬಾಣ ಸಾಕು, ಎಂದು ಅವನ ಮನಸ್ಸು ಹೇಳುತ್ತಿತ್ತು.

ಕಿರಾತ ಸೈನಿಕರು ಆ ಪುರುಷ ಪುಂಗವ ಪಾರ್ಥನನ್ನು ನೋಡಿದರು. ಧೈರ್ಯವೇ ಮೂರ್ತಿವೆತ್ತಂತೆ ಅಚಲವಾಗಿ ನಿಂತಿದ್ದ. ಅವನಲ್ಲಿರುವ ನಾರಾಯಣನ ಅಂಶವೂ ಸ್ಪಷ್ಟವಾಗಿ ತೋರುತ್ತಿತ್ತು. ಸೂರ್ಯನನ್ನು ಸುತ್ತುವರಿಯುವ ಮೋಡಗಳಂತೆ, ಕಿರಾತರು ನಾಲ್ಕೂ ಕಡೆಗಳಿಂದ ಕಿರೀಟಿಯನ್ನು ಬಳಸಿದರು; ಆದರೆ ಅವನ ತಪಸ್ತೇಜಕ್ಕೆ ಬೆರಗಾದರು. ತುಸು ಹೊತ್ತು ಮಾತ್ರ. ಕೂಡಲೆ ಬಿಲ್ಲುಗಳಿಂದ ಬಾಣಗಳನ್ನು ಬಿಡ ಹತ್ತಿದರು ಅರ್ಜುನನ ಮೇಲೆ. ಅವೆಲ್ಲವೂ ಪಕ್ಷಿಗಳಂತೆ ದೂರ ದೂರ ಹಾರಿಹೋಗಿ ಬಿಟ್ಟವು; ದಿಕ್ಕು ದಿಕ್ಕುಗಳನ್ನು ಭೇದಿಸಿದುವು.

ಈಗ ಅರ್ಜುನನ ಮೈ ಕಾಳೆಗದ ಹುರುಪಿನಿಂದ ಉಬ್ಬಿತು. ತಪಸ್ಸನ್ನು ಆಚರಿಸುವಾಗ ಮೈ ಸೊರಗಿತ್ತು; ಕವಚ ಸಡಿಲಾಗುತ್ತಿತ್ತು. ಈಗ ಉಬ್ಬಿದ ಮೈಗೆ ಕವಚ ಬಿಗಿಯಾಗಿ ಚಿಟಚಿಟ ಎನ್ನಹತ್ತಿತು. ಅರ್ಜುನ ವೀರಾವೇಶದಿಂದ ಮುಂದೆ ಹೆಜ್ಜೆಯಿಟ್ಟ. ಗಾಂಡೀವವನ್ನು ಕೈಯಲ್ಲಿ ತೆಗೆದುಕೊಂಡ, ಜೇವೊಡೆದ, ಬಾಣಹೂಡಿದ. ಕಿಡಿಗಳನ್ನು ಕಾರುವ ಕಣ್ಣುಗಳಿಂದ ಕಿರಾತ ಸೇನೆಯನ್ನು ನೋಡಿದ. ಕೂಡಲೆ ಅವರ ಮೇಲೆ ಅಗ್ನಿಬಾಣಗಳ ಮಳೆಗರೆದ! ಅವುಗಳ ಪ್ರಖರತೆಯ ಇದಿರಿಗೆ ಸೂರ್ಯಪ್ರಕಾಶವೂ ಮಂದವಾಯಿತು. ಆ ಬಾಣಗಳು ಕಿರಾತರ ಬಾಣಗಳನ್ನು ನಡುಹಾದಿಯಲ್ಲಿಯೇ ಕತ್ತರಿಸಿ ಬಿಡುತ್ತಿದ್ದುವು. ಅವನ ಬಾಣಗಳು ಯಾವ ದಿಕ್ಕಿನಿಂದ ಯಾವ ವೇಗದಲ್ಲಿ ಬರುತ್ತಿದ್ದುವೋ— ಇದು ಕಿರಾತರಿಗೆ ತಿಳಿಯದಾಯಿತು. ನೋಡಿದರೆ, ಒಂದೇ ಸಾರಿ ಹೆದೆಯನ್ನು ಜಗ್ಗಿರುತ್ತಿದ್ದ. ಬಾಣಗಳಾದರೋ ಹತ್ತು ದಿಕ್ಕುಗಳಿಂದಲೂ ಹಾರುತ್ತಿದ್ದುವು! ಅದರಲ್ಲಿಯೂ ಆಶ್ಚರ್ಯವೆಂದರೆ— ಒಂದು ಬಾಣನಟ್ಟ ಸ್ಥಳದಲ್ಲಿ ಮತ್ತೊಂದು ಬಾಣ ಸೇರುತ್ತಿರಲಿಲ್ಲ. ಬೇಡಪಡೆ ಬಾಣದ ಗಾಯಗಳಿಂದ ಮೆತ್ತಗಾಯಿತು; ಚದುರಿತು!

ಈ ತಪಸ್ವಿ ಮಾಯಾವಿಯಾಗಿರಬೇಕು. ಒಬ್ಬನೇ ಅನೇಕ ರೂಪಗಳನ್ನು ಧರಿಸುತ್ತಾನೆ; ನಮ್ಮ ಮೇಲೆ ಬಾಣ ಬಿಡುತ್ತಾನೆ; ಅಥವಾ ನಮ್ಮ ಬಾಣಗಳೇ ನಮಗೆ ತಿರುಗುವಂತೆ ಮಾಟ ಮಾಡುತ್ತಿರಬಹುದೇ? ಇಲ್ಲವೆ ಈತನಿಗೆ ಬೆಂಬಲವಾಗಿ ಬೇರೆ ದೇವತೆಗಳು ನಮ್ಮ ಮೇಲೆ ಬಾಣಗಳ ಮಳೆಗರೆಯುತ್ತ ಇರಬಹುದೇ?.... ಇವನು ನಮ್ಮನ್ನಷ್ಟೇ ಕೊಲ್ಲುತ್ತಾನೋ ಅಥವಾ ಸಂಸಾರವನ್ನೇ ಸಂಹಾರ ಮಾಡುತ್ತಾನೋ !.... ಹೀಗೆಯೇ ತಂತಾವೇ ಆಲೋಚಿಸುತ್ತ ಕಿರಾತರು ಕಾಳಗದ ಕಣದಿಂದ ಕಾಲ್ದೆಗೆದರು !

---

## ೧೧. ಪಾರ್ಥನ ಪರೀಕ್ಷೆ

ಅರ್ಜುನನ ರಣಕೌಶಲ್ಯವನ್ನು ಕಂಡು ಪರಮೇಶ್ವರನಿಗೆ ಮಹದಾನಂದವಾಯಿತು. ಈಗ ಕಾಳೆಗದ ಒಂದು ಪ್ರಕರಣ ಪರಿಸಮಾಪ್ತವಾಗಿತ್ತು. ದೇವ ದೇವ ಮತ್ತೊಂದು ಅಧ್ಯಾಯ ಆರಂಭ ಮಾಡಿದ.

ಶಬರ ಶಂಕರ ಪಿನಾಕ ಧನುಸ್ಸನ್ನು ಎತ್ತಿಕೊಂಡ. ತ್ರಿಪುರ ಸಂಹಾರದ ಕಾಲಕ್ಕೆ ಅದೇ ಬಿಲ್ಲನ್ನು ಹಿಡಿಯಲಾಗಿತ್ತು. ಎಂದ ಮೇಲೆ, ಈಗ ಮುಂದೇನಾಗುವುದೋ ಎಂದು ಎಲ್ಲರೂ ಉತ್ಸುಕತೆಯಿಂದ ನೋಡಹತ್ತಿದರು.

ಶಂಕರ ಪಿನಾಕ ಧನುವಿನಿಂದ ಬಾಣಗಳನ್ನು ಬಿಡಹತ್ತಿದ. ಆ ಶರಗಳ ಸುಯ್ ದನಿಗೆ ಹಿಮಾಲಯವೇ ಪುಡಿಪುಡಿಯಾಗುವಂತೆ ಎನಿಸುತ್ತಿತ್ತು. ಆದರೆ ಅರ್ಜುನ ಎದೆಗೆಡಲಿಲ್ಲ. ಆ ಬಾಣಗಳಿಗೆ ಇದಿರಾಗಿ ಗಾಂಡೀವದಿಂದ ಶರವೃಷ್ಟಿಯನ್ನು ಆರಂಭಿಸಿದ; ಧನುರ್ವಿದ್ಯಾ ಕೌಶಲ್ಯದಿಂದ ಪರಮೇಶ್ವರನ ಶರೀರವನ್ನು ಬಾಣಗಳಿಂದ ಮುಚ್ಚಿಬಿಟ್ಟ !

ಶಬರ ಶಂಕರ ತಡವಿಲ್ಲದೆ ಆ ಬಾಣಗಳನ್ನು ಕೊಡಹಿದ. ಪ್ರತಿಯಾಗಿ ಪ್ರಖರ ಶರಗಳ ಪ್ರಹಾರ ಮಾಡತೊಡಗಿದ. ಅದರಿಂದ ಅರ್ಜುನನೇನೂ ಎದೆಗುಂದಲಿಲ್ಲ; ಇಷ್ಟೇ ಅಲ್ಲ, ಅವನ ರಣೋತ್ಸಾಹ ಇಮ್ಮಡಿ

ಸಿತು. ಅವನ ಕೆಂಗಣ್ಣು ಕಿಡಿ ಕಾರಹತ್ತಿದುವು. ಮೈಗೂದಲು ನಿಮಿರಿ ನಿಂತುವು. ಆ ಮೇಲೆ ಕೇಳಬೇಕೆ? ಗಾಂಡೀವ ಪುಂಖಾನು ಪುಂಖವಾಗಿ ಕೋಲುಗಳನ್ನು ಕಾರಹತ್ತಿತು. ಶಬರ ಸೇನಾಪತಿಯೂ ಅವುಗಳಿಗೆ ಸರಿದೊರೆಯಾಗಿ ಶರ ಪ್ರಹಾರ ಮಾಡುತ್ತಿದ್ದ. ಹೀಗೆಯೇ ಎಷ್ಟೋ ವೇಳೆ ನಡೆಯಿತು. ಸಾತ್ತ್ವಿಕರಾದ ಋಷಿಗಳು ಕೂಡ ಬೆಪ್ಪಾಗಿ ಈ ಹಿಂಸಾಚಾರವನ್ನು ನೋಡುತ್ತ ನಿಂತಿದ್ದರು.

ಈಗ ಅರ್ಜುನನಿಗೆ ಏನೇನೋ ವಿಚಾರ ಬರಹತ್ತಿದುವು. ತಾನು ವೀರಾಧಿವೀರ. ಆದರೆ ತನ್ನ ಇದಿರಿಗೆ ಕಾಡಾಡಿ ಒಬ್ಬನೇ ನಿಂತಿದ್ದಾನೆ. ಕ್ಷಣಕ್ಷಣಕ್ಕೆ ಅವನ ಕೈ ಮೇಲಾಗುತ್ತಿದೆ; ತನ್ನ ಶಕ್ತಿ ತಣ್ಣಗಾಗುತ್ತಲಿದೆ. ಇದೇನು ಮಾಟವೋ ಮಾಯೆಯೋ ತಿಳಿಯದಾಗಿದೆ. ಅಥವಾ ನಾನೇ ಬೇಡನೋ ಅವನೇ ಅರ್ಜುನನೋ ಇದೂ ತಿಳಿಯದು. ನನ್ನ ಗಾಂಡೀವ ಶಕ್ತಿ ಹೀನವಾಗಹತ್ತಿದೆ. ಅವನ ಬಾಣಗಳ ಧ್ವನಿಯಾದರೋ ನೆಲ – ಮುಗಿಲುಗಳನ್ನು ಬಿರಿಸುತ್ತಲಿದೆ. ಇನ್ನು ಆಶ್ಚರ್ಯವೆಂದರೆ, ಅವನ ಬಿಲ್ಲಿನಿಂದ ಬಾಣಗಳು ತಾವಾಗಿಯೇ ಹಾರುತ್ತಿವೆ. ಅವನಲ್ಲಿ ಕಡುಹಗೆಯ ಕೋಪಾಟೋಪವೂ ಕಾಣುತ್ತಿಲ್ಲ. ಕೇವಲ ವೀರ ವಿರಾಗಿಯಂತೆ ಶಾಂತಮೂರ್ತಿಯಾಗಿದ್ದಾನೆ. ಆದರೂ ಧನುರ್ವಿದ್ಯೆಯಲ್ಲಿ ಭೀಷ್ಮ – ದ್ರೋಣರನ್ನು ಮೀರಿಸುತ್ತಿದ್ದಾನೆ. ಇಂತಹ ಜಗಜಟ್ಟಿ ಈ ಅನಾರ್ಯರಲ್ಲಿ ಹುಟ್ಟಿದನಾದರೂ ಹೇಗೆ?....! ಏನೇ ಆಗಲಿ. ಇವನನ್ನು ಎಂತಾದರೂ ಗೆಲ್ಲಲೇಬೇಕು.

ಅರ್ಜುನ ಮತ್ತೆ ಗಾಂಡೀವವನ್ನು ಎತ್ತಿಕೊಂಡ; ಪ್ರಸ್ವಾಪನಾಸ್ತ್ರವನ್ನು ಹೂಡಿದ. ಅದನ್ನು ಬಿಡುತ್ತಲೇ ಆಕಾಶದಲ್ಲಿ ಅರ್ಧರಾತ್ರಿಯ ಅಂಧಕಾರ ಆವರಿಸಿತು. ಕಾಳ್ಗಿಚ್ಚಿನ ಹೊಗೆಯಂತಹ ಹೊಗೆಮೋಡಗಳು ಸೂರ್ಯ ಮಂಡಲವನ್ನು ಮರೆಮಾಡಿದುವು; ಕಿರಾತ ಸೈನಿಕರ ಕಣ್ಣಿಗೆ ಕತ್ತಲು ಗುಡಿಸಿತು. ಅವರೆಲ್ಲ ಮೋಹನಿದ್ರೆಯಿಂದ ಮೈಮರೆತರು. ಅವರ ಕೈಯಲ್ಲಿಯ ಕೈದುಗಳು ಕಳಚಿ ಬಿದ್ದು ಹೋದುವು.

ಕಿರಾತರು ಕತ್ತಲೆಯಲ್ಲಿ ಕಂಗೆಟ್ಟುದನ್ನು ಶಬರಶಂಕರ ನೋಡಿದ.

ಅದರ ಪರಿಹಾರಕ್ಕಾಗಿ ತನ್ನ ಮೂರನೆಯ ಕಣ್ಣನ್ನು ತೆರೆದ. ಆ ಪ್ರಖರ ತೇಜಸ್ಸು ಪ್ರಸ್ವಾಪನಾಸ್ತ್ರದ ಕತ್ತಲೆ ಕಳೆದುಬಿಟ್ಟಿತು. ಕಿರಾತರೆಲ್ಲ ಎಚ್ಚತ್ತರು. ಮತ್ತೆ ತಮ್ಮ ತಮ್ಮ ಆಯುಧಗಳನ್ನು ತೆಗೆದುಕೊಂಡರು. ಸೂರ್ಯಮಂಡಲ ಸ್ವಚ್ಛವಾಯಿತು. ದಿಕ್ಕುಗಳೆಲ್ಲ ಬೆಳಗಹತ್ತಿದುವು.

ತನ್ನ ಅಸ್ತ್ರ ವ್ಯರ್ಥವಾಯಿತಲ್ಲ, ಎಂದು ಅರ್ಜುನ ಅಧೀರನಾಗಲಿಲ್ಲ. ಆಮೇಲೆ ಕಿರಾತರನ್ನೆಲ್ಲ ಕಟ್ಟಿಬಿಡಬೇಕೆಂದು, ಸರ್ಪಾಸ್ತ್ರ ಸಂಧಾನ ಮಾಡಿದ. ಎತ್ತ ನೋಡಿದತ್ತ ಸರ್ಪಗಳೇ ಸರ್ಪಗಳು. ಅವುಗಳ ವಿಷವಾಯುವಿನಿಂದ ಸೈನಿಕರು ಸ್ಮೃತಿಯಿಲ್ಲದೆ ಬಿದ್ದರು. ಇದನ್ನು ಅಡಗಿಸಲು ಶಂಕರನಿಗೆ ಶಕ್ತಿಸಾಲದೇ ? ಅವನು ಕೂಡಲೆ ಗರುಡಾಸ್ತ್ರ ಪ್ರಯೋಗ ಮಾಡಿದ. ಅರೆಕ್ಷಣದಲ್ಲಿ ಆಕಾಶದ ತುಂಬ ಗರುಡ ಪಕ್ಷಿಗಳು ಹಿಂಡು ಹಿಂಡಾಗಿ ಹಾರಾಡಹತ್ತಿದುವು. ಅವುಗಳ ರೆಕ್ಕೆಯ ಗಾಳಿಗೆ ಎಂತೆಂಥ ಮರಗಳು ಮೂಲ ಸಹಿತ ಕಿತ್ತುಬಿದ್ದುವು. ಅರ್ಜುನನ ಸರ್ಪಾಸ್ತ್ರದ ಸರ್ಪಗಳಂತೂ ಹೇಳಹೆಸರಿಲ್ಲದೆ ಹೋದುವು.

ಅರ್ಜನ ಮತ್ತಿಷ್ಟು ಕೆರಳಿದ. ಮೂರನೆಯದಾಗಿ ಅಗ್ನೇಯಾಸ್ತ್ರವನ್ನು ಪ್ರಯೋಗಿಸಿದ. ಆ ಬಾಣಗಳ ಅಗ್ನಿಜ್ವಾಲೆಗಳು ಪ್ರಳಯಾಗ್ನಿಯ ಪ್ರಖರತೆಯನ್ನು ಮೀರಿಸಿದುವು. ಪ್ರಪಂಚವೇ ಸುಟ್ಟು ಬೂದಿಯಾಗುವುದೋ ಎಂದು ತೋರುತ್ತಿತ್ತು. ಪರಮೇಶ್ವರ ಪ್ರತಿಯಾಗಿ ವರುಣಾಸ್ತ್ರವನ್ನು ಜಡಿದ. ಪರಿಣಾಮವಾಗಿ, ಪ್ರಚಂಡ ಮೋಡಗಳು ಮುಗಿಲ ಮಾರ್ಗದಲ್ಲಿ ಸಂಚರಿಸಹತ್ತಿದುವು. ಅವುಗಳ ಮಳೆಯ ರಭಸಕ್ಕೆ ನೆಲವೆಲ್ಲ ಜಲಮಯವಾಯಿತು. ಅಗ್ನೇಯಾಸ್ತ್ರದ ಉರಿನಾಲಿಗೆಗಳು ಸುಯ್ ಎಂದು ಹೀದು ಹೋದುವು !

ಅರ್ಜುನ–ಶಂಕರರ ಅಸ್ತ್ರ–ಪ್ರತ್ಯಸ್ತ್ರ ಪ್ರಯೋಗ ಈಗ ಒಂದು ಹದಕ್ಕೆ ಬಂದಿತು. ಅರ್ಜುನನಿಗೆ ಸೋಲಿನಮೇಲೆ ಸೋಲು ಒದಗುತ್ತಿತ್ತು. ಅವನ ಕಣ್ಣುಗಳಲ್ಲಿ ಕ್ರೋಧಾಶ್ರುಗಳು ತುಳುಕುತ್ತಿದ್ದುವು. ಆದರೂ ಕೈ ಮೇಲಾಗಲೊಲ್ಲದು. ಕಾದಾಡಿ ಕಾದಾಡಿ ಕೂದಲು ಕೆದರಿ ಹೋಗಿದ್ದುವು. ಮೈಯೆಲ್ಲ ಬೆವರು ಹನಿಗಳಿಂದ ಹಸನಾಗು

ತ್ತಿತ್ತು. ಅವನ ಕ್ಷಾತ್ರದ ಕೆಚ್ಚು ಕ್ಷಣಕ್ಷಣಕ್ಕೆ ಕೆರಳುತ್ತಿತ್ತು. ಅದೇ ಆವೇಶದಲ್ಲಿಯೇ ಗಾಂಡೀವ ಧನುಸ್ಸನ್ನು ಎತ್ತಿಕೊಂಡ; ಒಂದೇಸವನೆ ಕಿರಾತ ಪಡೆಯ ಮೇಲೆ ಕೋಲುಗಳ ಮಳೆಗರೆಯಹತ್ತಿದ.

ಕಿರಾತ ಪಡೆ ಕಂಗೆಟ್ಟು ಹೋಯಿತು. ಎಲ್ಲಿ ಇದ್ದೇವೆ, ಎಂಬುದೇ ಅವರಿಗೆ ತಿಳಿಯದಾಯಿತು. ಆದರೆ, ಶಬರ ಸೇನಾಪತಿಗೆ ಆ ಬಾಣಗಳಿಂದ ಯಾವ ಪರಿಣಾಮವೂ ಆಗಲಿಲ್ಲ. ಅವನ ಮುಖದ ಮೇಲೆ ಆನಂದದ ಕಳೆ ಉಕ್ಕುತ್ತಿತ್ತು. ಶಿವನ ಅಂತರಂಗದಲ್ಲಿ ಮಾತ್ರ ಅರ್ಜುನನ ಬವಣೆಯ ಬಗೆಗೆ ಮರುಕ ಹುಟ್ಟುತ್ತಿತ್ತು. ಆದರೂ ಮುಂಬರುವ ಯುದ್ಧದಲ್ಲಿ, ಇಂದಿನ ಕಾಳೆಗದಿಂದ ಮತ್ತಿಷ್ಟು ಶಕ್ತಿ ಸಂಪನ್ನನಾಗುತ್ತಾನೆಂದು ಹಿಗ್ಗುತ್ತಿದ್ದ ಶಿವ.

ಈಗ ಕಾಳೆಗ ಮತ್ತೆ ಮುಂದುವರಿಯಬೇಕಾಗಿತ್ತು; ಅರ್ಜುನನ ಶೂರತನ ಪ್ರಪಂಚಕ್ಕೆಲ್ಲ ಗೊತ್ತಾಗಬೇಕಾಗಿತ್ತು. ಅದಕ್ಕಾಗಿ ಶಿವ ಮತ್ತೆ ರುದ್ರ ರೂಪವನ್ನು ಧರಿಸಿದ. ಪಿನಾಕ ಧನುಸ್ಸನ್ನು ಎತ್ತಿ ಝೇಂಕರಿಸಿದ. ಅರ್ಜುನ ಆ ಪ್ರಳಯ ಭಯಂಕರ ನಾದವನ್ನು ಕೇಳಿದ; ಮತ್ತು ಶಬರನನ್ನು ಎಡದಿಂದ ಬಲಕ್ಕೆ ಬಲದಿಂದ ಎಡಕ್ಕೆ ನೋಡಿದ. ಈ ಶಕ್ತಿಶಾಲಿ ಯಾರಾಗಿರಬಹುದು? ಎಂದು ತನ್ನನ್ನು ತಾನೇ ಕೇಳಿಕೊಂಡ.

ಅಷ್ಟರಲ್ಲಿ ಶಬರನ ಬಾಣಗಳು ವೇಗವೇಗದಿಂದ ಅರ್ಜುನನನ್ನು ಆವರಿಸಿದುವು. ಪ್ರತಿಯಾಗಿ ಅರ್ಜುನನೂ ಬಾಣ ಪ್ರಯೋಗ ಮಾಡಿದ. ಹಾಗೆಯೇ ಖಾಡಾಖಾಡಿ ಕಾಳೆಗ ನಡೆಯಿತು. ಪಾಂಡುಪುತ್ರನ ಬತ್ತಳಿಕೆ ಬರಿದಾಗಿ ಹೋಯಿತು! ಅರ್ಜುನ ಮತ್ತೆ ಮತ್ತೆ ಕೈಯಾಡಿ ನೋಡಿದ. ಯಾವ ಬಾಣವೂ ಕೈಗೆ ಹತ್ತಲಿಲ್ಲ. ಅಷ್ಟರಲ್ಲಿ ಶಬರಶಂಕರ ಬಾಣಪ್ರಯೋಗದಿಂದ ಕವಚವನ್ನು ಕತ್ತರಿಸಿ ಬಿಟ್ಟ! ಒಂದೊಂದು ಬಾಣಗಳನ್ನು ಅವನ ಮೈಯಲ್ಲಿ ಸೇರಿಸಿದ.

ಅರ್ಜುನನ ಸಿಟ್ಟು ರೋಮಗಳಲ್ಲಿ ಸಿಡಿದೆದ್ದಿತು. ಅರ್ಧಚಂದ್ರಾಕಾರದ ಬಿಲ್ಲನ್ನೇ ಎತ್ತಿ ಶಿವನ ಮೇಲೆ ಎಸೆದುಬಿಟ್ಟ! ಶಿವ ಅದನ್ನು ತನ್ನೊಳಗೇ ಅಡಗಿಸಿಕೊಂಡ.

ಬಿಲ್ಲು ಹೋಯಿತು; ಬಾಣಗಳು ಹೋದುವು. ಆದರೆ ಅರ್ಜುನನ ಧೈರ್ಯವಾಗಲಿ ಸಹನಶಕ್ತಿಯಾಗಲಿ ತೊಲಗಲಿಲ್ಲ. ಅವನು ಕೂಡಲೆ ಖಡ್ಗ ಯುದ್ಧವನ್ನು ಆರಂಭಮಾಡಿದ. ಖಡ್ಗ ಮಿಂಚಿನ ವೇಗದಿಂದ ತಿರುಗುತ್ತಿತ್ತು; ಶಿವನ ಬಾಣಗಳನ್ನು ನಡು ಹಾದಿಯಲ್ಲಿಯೇ ತುಂಡರಿಸಿ ಚೆಲ್ಲುತಿತ್ತು. ಕಿರೀಟಿಯ ಕತ್ತಿಯ ಕಲಿತನ ಕೆಲಬಲದವರನ್ನು ಚಕಿತಗೊಳಿಸಿತು. ಆದರೆ ಶಿವ, ಉಪಾಯವಾಗಿ, ಅವನ ಕತ್ತಿಯನ್ನು ಹಿಡಿಕೆ ಸಹಿತವಾಗಿ ಕತ್ತರಿಸಿ ಹಾಕಿದ.

ಈಗ ಅರ್ಜುನ ನಿರಾಯುಧನಾಗಿ ನಿಂತ. ಅವನಿಗೆ ಭುಜಬಲದ ಹೊರತು ಬೇರೆ ಆಧಾರವೇ ಉಳಿಯಲಿಲ್ಲ. ಆ ಬಲದಿಂದ ದೊಡ್ಡ ದೊಡ್ಡ ಮರಗಳನ್ನು ಕಿತ್ತು ಶಬರನ ಮೇಲೆ ಎಸೆದ. ಬೇಡರೊಡೆಯ ಅವುಗಳನ್ನು ಅಲ್ಲಿಂದಲ್ಲಿಯೇ ತುಂಡರಿಸಿ ಚೆಲ್ಲಿದ ಬಾಣಗಳಿಂದ. ಮರಗಳಿಂದ ಉದಿರಿದ ಹೂಗಳು ರಣದೇವತೆಗೆ ಹೂ ಪೂಜೆಯನ್ನು ಕಟ್ಟಿದಂತೆ ಕಂಗೊಳಿಸುತ್ತಿದ್ದುವು.

ಈ ಅಪಜಯದಿಂದ ಅರ್ಜುನನ ತಾಳ್ಮೆ ತೊಲಗಿತು. ಅವನು ಆವೇಶದಿಂದ ಓಡುತ್ತ ಹೋದ; ಶಬರನ ಹರವಾದ ಎದೆಯ ಮೇಲೆ ತನ್ನ ವಜ್ರಮುಷ್ಟಿಯಿಂದ ಗುದ್ದಿದ. ಆದರೆ ಪರಮೇಶ್ವರ, ಅವಿನಯದ ಪುತ್ರನ ಉದ್ಧತತನವನ್ನು ತಡೆಕೊಳ್ಳುವ ತಂದೆಯಂತೆ, ಆ ಪ್ರಹಾರವನ್ನು ಶಾಂತಿಯಿಂದಲೇ ಸ್ವೀಕರಿಸಿದ; ಮತ್ತು ಪಾರ್ಥನ ವೀರತನಕ್ಕಾಗಿ ಸಂತೋಷಪಟ್ಟ. ಆದರೂ ಅರ್ಜುನನ ಪರಾಕ್ರಮದ ಪರಾಕಾಷ್ಠೆಯನ್ನು ತೋರಿಸಲು ಇದೇ ಸಮಯ ಎಂದುಕೊಂಡ. ಅದಕ್ಕಾಗಿ ತನ್ನ ವಜ್ರಮುಷ್ಟಿಯಿಂದ ಅರ್ಜುನನ ಮೋರೆಯ ಮೇಲೆ ಬಲವಾಗಿ ಬಡಿದ. ಕಾಳಗ ಕೆಲಹೊತ್ತು ನಡೆಯಿತು. ಆ ಹೊಡೆತಗಳ ಘೋರ ಧ್ವನಿ ಗಿರಿಕಂದರಗಳನ್ನು ಹೊಕ್ಕು ಘೋರತರವಾಗಿ ಹೊರಬಂದಿತು.

ಶಿವನ ಪ್ರಹಾರಗಳಿಂದ ಅರ್ಜುನನ ದೇಹ ಹಣ್ಣು ಹಣ್ಣಾಯಿತು. ಅದರಿಂದೇನೂ ಅವನು ಕೆಡುಕೆನಿಸಿಕೊಳ್ಳಲಿಲ್ಲ. ಇದೂ ತಪಸ್ಸಿನ ಒಂದು ಅಂಶವೇ, ಎಂದು ಸಮಾಧಾನಪಟ್ಟ.

ಅರ್ಜುನನ ಹೊಡೆತದಿಂದ ಶಿವನ ಎದೆ ಕೆಂಪಾಗಿ ಹೋಗಿತ್ತು. ಅದೇ ಆವೇಶದಲ್ಲಿ ಶಬರ ಶಂಕರ ಅರ್ಜುನನ ಎದೆಗೆ ಬಲವಾಗಿ ಗುದ್ದಿದ. ಆ ಪೆಟ್ಟಿಗೆ ಅರ್ಜುನನ ಮೂರು ನಾಲ್ಕು ಸಲ ಹಿಂಬರಿಕೆಲಾಗ ಹಾಕಿದ.

ತುಸು ಹೊತ್ತಿನಲ್ಲಿಯೇ ಇಬ್ಬರಿಗೂ ಮಲ್ಲಕಾಳೆಗ ಆರಂಭವಾಯಿತು. ಇಬ್ಬರೂ ಸಮಬಲರಾಗಿ ಕಾದಿದರು. ಒಬ್ಬರೊಬ್ಬರನ್ನು ನೆಲಕ್ಕೆ ಹಾಕಿ ಮೆಟ್ಟಿದರು; ತೆಕ್ಕೆಯಲ್ಲಿ ಹಿಚುಕಿ ಹಣ್ಣುಮಾಡಿದರು.

ಒಮ್ಮೆ ಶಬರ ತೋಳತೆಕ್ಕೆಯಿಂದ ನುಣುಚಿಕೊಂಡ; ಆಕಾಶದತ್ತ ನೆಗೆದ. ಕೂಡಲೆ ಅರ್ಜುನನೂ ನೆಗೆದ; ಅವನ ಎರಡೂ ಕಾಲುಗಳನು ಬಿಗಿಯಾಗಿ ಹಿಡಿದುಕೊಂಡ.

ಇಲ್ಲಿಗೆ ಪಾರ್ಥನ ಪರೀಕ್ಷೆ ಮುಗಿಯಿತು. ಪಾಂಡುಪುತ್ರನ ಪರಾಕ್ರಮ ವಿಶೇಷದಿಂದ ಪರಶಿವನಿಗೆ ಮೊದಲೇ ಮಹದಾನಂದವಾಗಿತ್ತು. ಈಗ ಆ ಭಕ್ತಶಿರೋಮಣಿ ತನ್ನ ಪಾದಗಳನ್ನು ಹಿಡಿದು ಬಿಗಿದಪ್ಪಿಕೊಂಡಿದ್ದಾನೆ. ಶಿವನ ಹರ್ಷವಾಯು ಹೊಟ್ಟೆಯಲ್ಲಿ ಹಿಡಿಸದಾಯಿತು. ಅದು ಗದ್ಗದ ದನಿಯ ರೂಪದಿಂದ ಹೊರಬರತೊಡಗಿತ್ತು. ಆನಂದಾಶ್ರುಗಳನ್ನು ಸುರಿಯ ತೊಡಗಿದ್ದುವು. ಶಬರ ಶಂಕರ ಅರ್ಜುನನ್ನು ಆತ್ಮಾನಂದದಿಂದ ಆಲಂಗಿಸಿದ.

—

## ೧೨. ಶಸ್ತ್ರಾಸ್ತ್ರ ಸಂಪಾದನೆ

ಪಾಂಡುಪುತ್ರ ಅಚ್ಚರಿಯ ನೋಟದಿಂದ ಶಬರನನ್ನು ನೋಡಹತ್ತಿದ. ಅವನು ಮೊದಲಿದ್ದ ಬೇಡರೊಡೆಯನಾಗಿರಲಿಲ್ಲ; ಅವನ ಆರಾಧ್ಯದೇವತೆಯಾದ ಪರಶಿವನಾಗಿದ್ದ. ಸುಂದರ ಶರೀರದ ಮೇಲೆ ಭಸ್ಮಲೇಪಿತವಾಗಿತ್ತು, ತಲೆಯ ಮೇಲೆ ಅರ್ಧ ಚಂದ್ರನ ಲಾಂಛನವಿತ್ತು, ಹೆಗಲ ಮೇಲೆ ಕೆಂಜೆಡೆ ನೇತಾಡುತ್ತಿದ್ದುವು !

ಅರ್ಜುನ ತನ್ನ ಇಷ್ಟದೇವತೆಗೆ ಸಾಷ್ಟಾಂಗ ನಮಸ್ಕಾರ ಹಾಕಿದ. ಎದ್ದು ಕತ್ತೆತ್ತಿ ಆ ಮಂಗಲ ರೂಪವನ್ನು ಕಣ್ತುಂಬ ನೋಡಿದ.

ಆಶ್ಚರ್ಯ ! ಅರ್ಜುನನ ಬಾಣ ತುಂಬಿದ ಬತ್ತಳಿಕೆ, ಖಡ್ಗ, ಗಾಂಡೀವ, ಮತ್ತು ಕವಚ ಆ ದೇವದೇವನಲ್ಲಿಯೇ ಇದ್ದುವು. ಆ ಶುಭ ಸಮಯ ದಲ್ಲಿ ದೇವತೆಗಳು ದೇವಲೋಕದಿಂದ ಹೂ ಮಳೆಗರೆದರು. ದಶ ದಿಕ್ಕುಗಳಿಂದ ಮಂಗಲವಾದ್ಯ ಮೊಳಗಿದುವು. ದೇವೇಂದ್ರನೂ ಸಕಲ ಲೋಕಪಾಲರೂ ಮಣಿಖಚಿತ ವಿಮಾನಗಳಲ್ಲಿ ಕುಳಿತು ಹಿಮಾಲಯ ದತ್ತ ಹಾರಿದರು. ಆಗ ನಕ್ಷತ್ರ ಲೋಕವೇ ಭೂಲೋಕಕ್ಕೆ ಇಳಿಯಿ ವಂತೆ ತೋರುತ್ತಿತ್ತು.

ಪರಮೇಶ್ವರ ಪ್ರಸನ್ನನಾದುದರಿಂದ ಅರ್ಜುನನ ತಪಸ್ಸು ಸಫಲ ವಾಗಿತ್ತು. ಆ ಆನಂದ ಭರದಲ್ಲಿ ಆತನು ಇಷ್ಟದೇವತೆಯ ಸ್ತುತಿ ಯನ್ನು ಆರಂಭಿಸಿದ—

ಹೇ ಸೃಷ್ಟಿಕರ್ತ, ದಯಾಸಾಗರಾ, ನಿಮ್ಮ ಆರಾಧನೆಯಿಂದ ಯಾವ ಮನುಷ್ಯನೂ ಅಮರನಾಗುತ್ತಾನೆ; ಅಷ್ಟೇ ಅಲ್ಲ, ಶರಣಾಗತರಿಗೆ ರಕ್ಷ ಕನೂ ಆಗುತ್ತಾನೆ. ನಿಮ್ಮಲ್ಲಿ ಭಕ್ತಿಯಿಲ್ಲದವನಿಗೆ ಆಪತ್ತು ಆಗಮಿಸು ತ್ತಿವೆ, ಬಯಕೆಗಳು ಬಯಲಾಗುತ್ತಿವೆ. ಅವನನ್ನು ಯಾರೂ ಎಂದೂ ಮನ್ನಿಸುವುದಿಲ್ಲ. ನಿಮ್ಮ ದಯೆಯಿಂದಲೇ ಸಜ್ಜನರು ಸಾಂಸಾರಿಕ ಸಂಕಷ್ಟಗಳನ್ನು ಪರಿಹರಿಸಿಕೊಳ್ಳುತ್ತಾರೆ; ಮೋಕ್ಷಸುಖವನ್ನು ಪಡೆ ಯುತ್ತಾರೆ. ನಿಮ್ಮ ಚಿತ್ತದಲ್ಲಿ ಪ್ರೇಮವಿದೆ, ವಿಲಾಸವಿಲ್ಲ. ಅರ್ಧಾಂ ಗಿನೀದೇವಿ ಸದಾ ಸನ್ನಿಧಿಯಲ್ಲಿಯೇ ಇರುತ್ತಾಳೆ; ಆದರೆ ಕಾಮದೇವ ನಿಮ್ಮನ್ನು ಕಾಡಿಸಲಾರ. ಇಂತಹ ನಿಮ್ಮ ಗೂಢ ಚರಿತ್ರ ಸಾಮಾನ್ಯರ ಬುದ್ಧಿಗೆ ನಿಲುಕಲಾರದು. ನಿಮ್ಮ ಮೈಮೇಲೆ ಹಾವು, ಗಜ ಚರ್ಮಾಂ ಬರ, ಭಸ್ಮ, ಜಿಡ್ಡುಗಟ್ಟಿದ ಜಡೆ ಮುಂತಾಗಿ ಕುರೂಪ ವಸ್ತುಗಳೇ ಇವೆ. ಆದರೂ ಈ ರುದ್ರ ರಮಣೀಯತೆ ಬೇರಾವ ದೇವತೆಗಳ ಲ್ಲಿಯೂ ಕಾಣಸಿಕ್ಕದು. ಎಂತೆಯೇ ಭಾವುಕರೆಲ್ಲ ಭಕ್ತಿಯಿಂದ ಭಜಿಸು ತ್ತಾರೆ ನಿಮ್ಮನ್ನು.

ದೇವ ದೇವಾ, ನೀವು ಮೇರುಗಿರಿಗಿಂತಲೂ ಮಹತ್ತಮರು; ನಾನು ಕ್ಷುದ್ರ ಅಣುವಿಗಿಂತಲೂ ಅಲ್ಪತಮ. ನೀವು ಜ್ಞಾನಿಶ್ರೇಷ್ಠರು; ನಾನು

ಅಜ್ಞಾನಿಗಳಲ್ಲಿ ಅಜ್ಞಾನಿ ಬಾಲಕ. ತಿಳಿವಳಿಕೆಯಿಲ್ಲದೆ ನಾನು ತಮ್ಮ ಮೇಲೆ ಏರಾಟವನ್ನು ನಡೆಸಿದೆ. ಅದನ್ನೆಲ್ಲ ಪುತ್ರನೆಂದು ಬಗೆದು ಕ್ಷಮಿಸಬೇಕು,

ದಯಾಲು ಪ್ರಭೋ, ನನ್ನ ಅಣ್ಣ ಧರ್ಮರಾಜ ಸತ್ಯವಂತ, ಶಾಂತಿ ಪ್ರಿಯ. ಅವನನ್ನು ವಂಚಿಸಿ ದುಷ್ಟ ಕೌರವರು ನಮ್ಮ ರಾಜ್ಯವನ್ನು ಅಪಹರಿಸಿದ್ದಾರೆ. ನಾವೀಗ ಅವರನ್ನು ಗೆಲ್ಲಬೇಕಾಗಿದೆ; ನಮ್ಮ ರಾಜ್ಯ ಲಕ್ಷ್ಮಿಯನ್ನು ಮರಳಿ ಪಡೆಯಬೇಕಾಗಿದೆ. ಸದ್ಯಃ ನಮ್ಮಲ್ಲಿ ಶಸ್ತ್ರಾಸ್ತ್ರ ಗಳ ಸಾಮಗ್ರಿಯಿಲ್ಲ. ವೈರಿಗಳು ಸಾಕಷ್ಟು ಸೇನಾಸಾಮಗ್ರಿಗಳನ್ನು ಬೆಳೆಸಿಕೊಂಡಿದ್ದಾರೆ. ಯುದ್ಧದಲ್ಲಿ ಅವರನ್ನು ನಾವು ಇದಿರಿಸಬೇಕಾ ಗಿದೆ. ಪ್ರಭೋ, ನೀವು ನಮಗೆ ಶಕ್ತಿವಂತ ಶಸ್ತ್ರಾಸ್ತ್ರಗಳನ್ನು ಅನುಗ್ರ ಹಿಸಬೇಕೆಂದು ಬೇಡುತ್ತೇನೆ.

ಅರ್ಜುನ ಮತ್ತೊಮ್ಮೆ ಮಹಾದೇವನ ಪಾದಗಳ ಮೇಲೆ ಮಸ್ತಕ ವನ್ನು ಇಟ್ಟ. ಪರಮೇಶ್ವರ ಅತ್ಯಾನಂದದಿಂದ ಅವನನ್ನು ಮೇಲೆ ತ್ತಿದ; ಬಿಗಿಯಾಗಿ ಆಲಿಂಗಿಸಿದ. ಆ ಮೇಲೆ ಆತನಿಗೆ ರೌದ್ರಾಸ್ತ್ರ ವನ್ನು ದಯಪಾಲಿಸಿದ; ಮತ್ತು ಅದರ ಉಪಯೋಗ ಉಪಸಂಹಾ ರದ ಧನುರ್ವೇದ ವಿಧಾನಗಳನ್ನು ಉಪದೇಶಿಸಿದ.

ಆ ಕೂಡಲೆ ಇಂದ್ರನೇ ಮೊದಲಾದ ಲೋಕಪಾಲಕರು ತಮ್ಮ ತಮ್ಮ ಶಕ್ತಿಶಾಲಿ ಶಸ್ತ್ರಾಸ್ತ್ರಗಳನ್ನು ಅನುಗ್ರಹಿಸಿದರು; ಮತ್ತು ಶತ್ರು ಗಳನ್ನು ಸಂಹರಿಸಿ ಜಯಶಾಲಿಯಾಗು, ಎಂದು ಹರಸಿದರು. ಸುರಾಂಗನೆಯರು ಮಂಗಲ ಗೀತೆಗಳನ್ನು ಹಾಡಿದರು.

ಅಂದಿಗೆ ಅರ್ಜುನನ ತಪಸ್ಸು ಮುಗಿಯಿತು; ದೇವತೆಗಳಿಂದ ಶಸ್ತ್ರಾಸ್ತ್ರಗಳನ್ನು ಶುಭಾಶೀರ್ವಾದಗಳನ್ನು ಪಡೆದು ಫಲಪ್ರದವಾಯಿತು. ಅದೇ ಆನಂದದಲ್ಲಿ ಆತ ಬೇಗ ಬೇಗನೆ ದ್ವೈತವನಕ್ಕೆ ಮರಳಿದ; ಧರ್ಮರಾಜನಿಗೆ, ನಮಸ್ಕಾರ ಪೂರ್ವಕವಾಗಿ, ಸರ್ವ ಸಂತೋಷ ವಾರ್ತೆಯನ್ನು ಸಾದರ ಪಡಿಸಿದ.

—

ಮಕ್ಕಳು ಮತಿವಂತರಾಗಿ ನಾಡಿನ ಕಣ್ಮಣಿಗಳಾಗಬೇಕೆಂದು
ಯಾವ ತಂದೆ–ತಾಯಿಗಳು ಬಯಸರು ........ ?

## ಮತಿವಂತರಾಗಲು ಆದರ್ಶ ಸಾಹಿತ್ಯ ಬೇಕಲ್ಲವೇ ?

ಇದರಲ್ಲಿ

ಧರ್ಮಸ್ಥಾಪಕರು— ವೀರರಾದ ರಾಜರು ಹಾಗು ರಾಣಿಯರು— ರಾಜಕೀಯ ಪಟುಗಳು— ಕ್ರಾಂತಿಕಾರರು— ಪುರಾಣದ ಮಹಾ ಪುರುಷರು ಮೊದಲಾದ ಅನೇಕರ ಜೀವನ ಚರಿತ್ರೆಗಳಿವೆ !

ಭಗವಾನ್ ಬುದ್ಧದೇವ;
ಕವಿ ಮತ್ತು ಕವಿತೆ;
ಮಹಾವೀರ ಮಾರುತಿರಾಯ;
ರಾಜಾ ರಾಮಮೋಹನರಾಯ;
ರಾಷ್ಟ್ರಮಾತಾ ಕಸ್ತೂರಬಾ ಗಾಂಧಿ;
ಸ್ವಾಮಿ ವಿವೇಕಾನಂದರು;
ಬಲಶಾಲಿ ಭೀಮಸೇನ;
ಪಂಡಿತ ಈಶ್ವರಚಂದ್ರ ವಿದ್ಯಾಸಾಗರ;
ಸರ್ ಚಂದ್ರಶೇಖರ ವೆಂಕಟರಾಮನ್;
ಪಂಡಿತ ಜವಾಹರಲಾಲ ನೆಹರು;
ಸರೋಜಿನೀದೇವಿ ನಾಯುಡು;
ಝಾಂಸಿಯ ಮರೆಯದ ಮಹಾರಾಣಿ;
ಭಾರತದ ಭೀಷ್ಮ ಅಥವಾ ಮಹರ್ಷಿ ದಾದಾಭಾಯಿ ನೌರೋಜಿ,
ಮೌ. ಅಬುಲ್ ಕಲಾಮ ಅಝಾದ;
ಡಾ. ಎನಿ ಬೆಸೆಂಟ;
ಗೋಪಾಲಕೃಷ್ಣ ಗೋಖಲೆ;
ಡಾ. ಸರ್ವಪಲ್ಲಿ ರಾಧಾಕೃಷ್ಣನ್;
ಸರ್ ಸಯ್ಯದ ಅಹಮ್ಮದಖಾನ;
ಮಧುರ ಮಿಲನ ಅಥವಾ ಭರತನ ಬಂಧು ಪ್ರೇಮ;
ಕುರುಕ್ಷೇತ್ರದ ಕಡುಗಲಿ ಅಥವಾ ಕೆಟ್ಟೆದೆಯ ಕರ್ಣ;
ಭಕ್ತ ಪ್ರಲ್ಹಾದ (ಏಕಾಂಕ ನಾಟಕ);
ವರಕವಿ ರವೀಂದ್ರರು;
ಶ್ರೀಕೃಷ್ಣ ಸುದಾಮ;
ಅಳಿವಿಲ್ಲದ ಅಭಿಮನ್ಯು;
ಪೌರಾಣಿಕ ಕತೆಗಳು;
ಮಹಾತ್ಮಾ ಗಾಂಧಿ;
ಒಂದನೆಯ ದರ್ಜೆಯ ಕತೆ;
ಎರಡನೆಯ ದರ್ಜೆಯ ಕತೆ;
ಭಾರತೀಯರ ಚರಿತ್ರೆ;
ಮೂರನೆಯ ದರ್ಜೆಯ ಕತೆ;
ಸುರಾ ರಾಕ್ಷಸಿ;
ಧರ್ಮಸಾಮ್ರಾಜ್ಯ ಸಂಸ್ಥಾಪಕ ಶ್ರೀ ಶಿವ ಛತ್ರಪತಿ;
ನೇತಾಜಿ ಸುಭಾಸಚಂದ್ರ ಬೋಸ;
ದೇಶಬಂಧು ಚಿತ್ತರಂಜನದಾಸರು;
ಪುಟ್ಟಣ್ಣನ ಪಂಚತಂತ್ರ;
ನಾಲ್ಕನೆಯ ತರಗತಿಯ ಕತೆ;
ಶ್ರೀರಾಮಕೃಷ್ಣ ಪರಮಹಂಸರ ದಿವ್ಯ ಜೀವನ;
ಝಾಂಸಿಯ ಜಯಲಕ್ಷ್ಮಿ;
ಶ್ರೀ ವಿದ್ಯಾರಣ್ಯರು;
ದಾಸಶ್ರೇಷ್ಠ ಪುರಂದರದಾಸರು;
ರಾಷ್ಟ್ರಪತಿ ರಾಜೇಂದ್ರಪ್ರಸಾದರು;
ರಾಜರ್ಷಿ ಅಶೋಕ,
ಮಹಾತ್ಮಾ ಗಾಂಧಿ (ಸಚಿತ್ರ ದೊಡ್ಡ ಪುಸ್ತಕ).